
ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಸಂಪುಟ : 37 ಸಂಚಿಕೆ : 13 ಮನ್ಮಥ–ಮಕರ ಕಲಿಯುಗಾಬ್ದ 5117 15–2–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ‘ಆಜಾದ್ ಹೂಂ, ಆಜಾದ್ ಹೀ ರಹೂಂಗಾ!’

ದೀಪಾವಳಿಯ ಒಂದು ಸಂಜೆ. ಹಳ್ಳಿಯ ಒಂದು ರಸ್ತೆಯಲ್ಲಿ ಕತ್ತಲಾಗುತ್ತಿದ್ದಂತೆ ಎಲ್ಲೆಲ್ಲೂ ಬಣ್ಣಬಣ್ಣದ ಸಿಡಿಮದ್ದಿನ ಬೆಳಕು, ಹೂವಿನ ಕುಂಡಗಳು ಹಾರಿಸುತ್ತಿದ್ದ ಬೆಳಕಿನ ಹೂಗಳು. ಡಂ ಡಂ ಪಟಾಕಿ ಶಬ್ದ. ಅವತ್ತು ಆ ಹಳ್ಳಿಯ ಮಕ್ಕಳಿಗಂತೂ ಖುಷಿಯೋ ಖುಷಿ. ಅಪ್ಪ–ಅಮ್ಮಂದಿರನ್ನು ಪೀಡಿಸಿ ಕಾಡಿಸಿ ಬಾಣಾ ಬಿರುಸು ತಂದು ಹಚ್ಚಿದ್ದೂ ಹಚ್ಚಿದೇ.

ಒಂದು ಕಡೆ ಐದಾರು ಚಿಕ್ಕ ಚಿಕ್ಕ ಹುಡುಗರು ಅಲ್ಲಲ್ಲಿ ನಿಂತು ಪಟಾಕಿಗಳನ್ನು ಹಚ್ಚುತ್ತಿದ್ದರು. ಅವರ ಪೈಕಿ ಎಂಟು ವರ್ಷದ ಒಬ್ಬ ಹುಡುಗ ಅವರನ್ನೆಲ್ಲ ಹತ್ತಿರ ಕರೆದ. “ಬನ್ರೊ, ನಿಮ್ಮ ಹತ್ತಿರ ಇರೋ ಪಟಾಕಿಗಳನ್ನೆಲ್ಲ ತನ್ನಿ ಗುಡ್ಡೆ ಹಾಕೋಣ. ಬೆಂಕಿ ಹಚ್ಚೋಣ. ಎಷ್ಟು ಬೆಳಕು ಬರುತ್ತೆ ಗೊತ್ತೆ!”

ಹುಡುಗರೆಲ್ಲ ಓಡಿ ಬಂದು ಸುತ್ತ ಸೇರಿದರು. ತಮ್ಮ ಪಟಾಕಿಗಳನ್ನು ಗುಡ್ಡೆ ಹಾಕಿದರು. ಹುಡುಗ ಸರ್ರಂತ ಒಂದು ಕಡ್ಡಿ ಗೀರಿ ಪಟಾಕಿಯ ಗುಡ್ಡಗೆ ಬೆಂಕಿ ಇಟ್ಟ. ಭಗ್ಗೆಂದು ಹತ್ತಿಕೊಂಡಿತು. ಅಬ್ಬಾ! ರಸ್ತೆ ತುಂಬಾ ಕೆಂಪು ಬಣ್ಣದ ಬೆಳಕು. ಕಿವಿಗಚ್ಚುವ ಶಬ್ದ. ಹುಡುಗರಿಗೆ ಬಲು ಸಂತೋಷ. ಕುಣಿದು ಕುಪ್ಪಳಿಸಿ ಕೇಕೆ ಹಾಕಿ ನಕ್ಕಿದ್ದೂ ನಕ್ಕಿದ್ದೆ. “ನೋಡಿದಿರಾ. ಎಲ್ಲರೂ ತಮ್ಮ ತಮ್ಮ ಸಿಡಿಮದ್ದನ್ನು ಒಟ್ಟಿಗೆ ಸೇರಿಸಿದರೆ ಎಷ್ಟು ಬೆಳಕು!” ಎಂದ ಆ ಹುಡುಗ. “ಹೌದು ಹೌದು” ಎಂದರು ಹುಡುಗರೆಲ್ಲ.

ಆದರೆ ಆ ಗದ್ದಲದಲ್ಲಿ ಅವನ ಬಲ ಅಂಗೈ ಸುಟ್ಟು ಹೋಗಿತ್ತು. ಒಬ್ಬ ಹುಡುಗ ಅದನ್ನು ನೋಡಿದ. “ಅಯ್ಯೋ, ಇವನ ಅಂಗೈ ಸುಟ್ಟು ಹೋಗಿದೆ. ನಡೀರಿ ಇವರಮ್ಮನ್ನ



ಕರೆದುಕೊಂಡು ಬರೋಣ” ಎಂದು ಹೇಳಿದ. ಅವರೆಲ್ಲ ಎದ್ದು ಹೊರಡಲು ಸಿದ್ಧವಾದರು. ಆ ಹುಡುಗನೇ ಅವರನ್ನು ತಡೆದ. “ಬೆಪ್ಪುತಕ್ಕಡಿಗಳಾ, ಇದೇನು ಗಾಯ ಮಹಾ. ಒಂದೇ ದಿನದಲ್ಲಿ ವಾಸಿ ಆಗುತ್ತೆ. ಇಷ್ಟಕ್ಕೆಲ್ಲ ಅಮ್ಮನಿಗೆ ಯಾಕ್ರೊ ಹೇಳಬೇಕು? ಗಂಡು ಹುಡುಗರಾಗಿ ಇದಕ್ಕೆ ಹೆದರಬೇಕೆ? ಅದು ಹೇಡಿತನ, ಗಂಡಸುತನವಲ್ಲ. ಬನ್ನಿ ಬನ್ನಿ ಪಟಾಕಿ ಹಚ್ಚೋಣ” ಎಂದು ಮತ್ತೆ ಅವರ ಜೊತೇಲಿ ಬಾಣಾಬಿರುಸು ಬಿಡಲಾರಂಭಿಸಿದ.

**ಫೆಬ್ರುವರಿ 27 ಆಜಾದ್‌ರವರ ಹುತಾತ್ಮ ದಿನ**

ಅವನೇ ಕ್ರಾಂತಿವೀರ ಚಂದ್ರಶೇಖರ ಆಜಾದ್. ಮುಂದೆ ದೊಡ್ಡ ದೇಶಭಕ್ತನಾಗಿ ಬೆಳೆದು ನಿಂತವನು. ಆಗ ನಮ್ಮನ್ನು ಆಳುತ್ತಿದ್ದ ವಿದೇಶಿ ಶತ್ರುಗಳಾದ ಆಂಗ್ಲರನ್ನು ಸಿಂಹದಂತೆ ಹೆದರಿಸಿ, ನಡುಗುವಂತೆ ಮಾಡಿದವನು.

## ಬಾಲ್ಯದ ಬೆಳಕು

ಮಧ್ಯಪ್ರದೇಶದ ಭಾವರಾ ಎಂಬ ಹಳ್ಳಿಯಲ್ಲಿ ಸೀತಾರಾಮ್ ತಿವಾರಿ ಹಾಗೂ ಜಗರಾಣಿ ದೇವಿ ದಂಪತಿಗಳ ಮಗನಾಗಿ 1906 ಜುಲೈ 23ರಂದು ಚಂದ್ರಶೇಖರ ತಿವಾರಿಯ ಜನನವಾಯಿತು. ಭಾವರಾದ

*2ನೇ ಪುಟಕ್ಕೆ*

# ಚಿತೆಯಲ್ಲಿ ಚಳಿಕಾಯಿಸುವ ಮೊದಲು...

ಇತ್ತೀಚೆಗೆ ಹೈದರಾಬಾದ್ ವಿಶ್ವವಿದ್ಯಾಲಯದ ಪಿಹೆಚ್‌ಡಿ ವಿದ್ಯಾರ್ಥಿ ರೋಹಿತ್ ವೇಮುಲನ ದುರಾದೃಷ್ಟಕರ ಆತ್ಮಹತ್ಯೆಯಿಂದ ರಾಜಕೀಯ ಕೆಸರೆರಚಾಟಕ್ಕೆ ಹೊಸ ವಿಷಯ ದೊರೆತಿದೆ. ಚಿತೆಯಲ್ಲಿ ಚಳಿಕಾಯಿಸುವ ಮನೋವೃತ್ತಿಯ ಬುದ್ಧಿಜೀವಿ ಹಾಗೂ ಮಾಧ್ಯಮದ ಒಂದು ವರ್ಗ ಬೆಂಕಿಗೆ ತುಪ್ಪಸುರಿಯುವ ಕೆಲಸವನ್ನು ಎಂದಿನಂತೆ ನಡೆಸಿವೆ. ಈ ಹಿನ್ನೆಲೆಯಲ್ಲಿ ಅರಿಯಬೇಕಾದದ್ದು, ವಾಸ್ತವದಲ್ಲಿ ನಡೆದಿದ್ದೇನು? ಹಾಗೂ ಪ್ರತಿಷ್ಠಿತ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಿಗೆ ದುರ್ಬಲನಾದದ್ದು ಹೇಗೆ?

## ತುಸು ಹಿಂದಿನ ಘಟನಾವಳಿ

ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಸಂಘಟನೆಗಳ ನಡುವಿನ ಪೈಪೋಟಿ ಹೊಸತೇನಲ್ಲ. ಎಡಪಂಥೀಯ ಸಂಘಟನೆಗಳು ಹಾಗೂ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್(ಎಬಿವಿಪಿ) ನಡುವೆ ಸದಾ ಭಿನ್ನಾಭಿಪ್ರಾಯ ಇದ್ದೇ ಇದೆ. ಆದರೆ 2015ರ ಆಗಸ್ಟ್ ತಿಂಗಳಿನಲ್ಲಿ ಭಯೋತ್ಪಾದಕ ಯಾಕೂಬ್ ಮೆಮನ್‌ಗೆ ಗಲ್ಲು ಶಿಕ್ಷೆ ವಿಧಿಸಿದ್ದನ್ನು ವಿರೋಧಿಸಿ ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ರೋಹಿತ್ ಸದಸ್ಯನಾಗಿದ್ದ ಅಂಬೇಡ್ಕರ್ ಸ್ಟೂಡೆಂಟ್ ಅಸೋಸಿಯೇಶನ್ (ಎಎಸ್‌ಎ) ಪ್ರತಿಭಟನೆ ನಡೆಸಿತು. ಇದನ್ನು ವಿರೋಧಿಸಿ ಎಬಿವಿಪಿಯ ಸುಶೀಲ್ ಕುಮಾರ್ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಇದರಿಂದ ಕೆರಳಿದ ಏಎಸ್‌ಏ ಕಾರ್ಯಕರ್ತರು ಸುಶೀಲ್ ಕುಮಾರ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿದರು; ಅಲ್ಲದೇ ಫೇಸ್‌ಬುಕ್‌ನಲ್ಲಿನ ಅಭಿಪ್ರಾಯವನ್ನು ಅಳಿಸುವಂತೆ ಬಲವಂತ ಮಾಡಿದರು. ಸುಶೀಲ್ ಕುಮಾರ್ ಆಸ್ಪತ್ರೆಗೆ ದಾಖಲಾದರು, ಅವರನ್ನು ಕಾಣಲು ಬಂದ ಅವರ ತಾಯಿಯನ್ನೂ ಎಎಸ್‌ಎನ ಕಾರ್ಯಕರ್ತರು ತುಂಬ ಕೆಟ್ಟದಾಗಿ ಅವಮಾನಿಸಿದರು. ಆಕೆ ವಿಶ್ವವಿದ್ಯಾಲಯದಲ್ಲಿ ದೂರು ದಾಖಲಿಸಿದರು.

ಈ ಘಟನೆಯ ಕುರಿತು ಹಲವು ತಿಂಗಳ ಕಾಲ ವಿಚಾರಣೆ ನಡೆಸಿದ ವಿಶ್ವವಿದ್ಯಾಲಯವು ಏಎಸ್‌ಏಗೆ ಸೇರಿದ ರೋಹಿತ್ ವೇಮುಲ ಮತ್ತು ಅವರ ಕೆಲವು ಸಹಚರರನ್ನು ಹಾಸ್ಟೆಲ್‌ನಿಂದ ಅಮಾನತ್ತು ಮಾಡಿ ಅವರಿಗೆ ದೊರೆಯುತ್ತಿದ್ದ ಮಾಸಿಕ 25ಸಾವಿರ ರೂ.ಗಳ ವಿದ್ಯಾರ್ಥಿ ವೇತನವನ್ನು ತಡೆ ಹಿಡಿಯಿತು. ವಿಶ್ವವಿದ್ಯಾಲಯದ ನಿರ್ಣಯವನ್ನು ವಿರೋಧಿಸಿದ ರೋಹಿತ್ ಮತ್ತು ಸಹಚರರು ಹಾಸ್ಟೆಲಿನ ಆವರಣದಲ್ಲೇ ಟೆಂಕ್ ಹಾಕಿಕೊಂಡು ವಾಸ ಮಾಡುತ್ತ ಪ್ರತಿಭಟಿಸುತ್ತಿದ್ದಲ್ಲದೇ ನ್ಯಾಯಾಲಯದ ಮೆಟ್ಟಿಲನ್ನೂ ಹತ್ತಿದರು. ಈ ಪ್ರಕರಣವು ನ್ಯಾಯಾಲದ ವಿಚಾರಣೆಯಲ್ಲಿದೆ.

ಇದರ ನಡುವೆ ಕಳೆದ ಜನವರಿ 17ರಂದು ರೋಹಿತ್ ವೇಮುಲ ಆತ್ಮಹತ್ಯೆಗೆ ಶರಣಾದ. ಇದರೊಂದಿಗೆ ಆತನ ಆತ್ಮಹತ್ಯೆಗೆ ಕಾರಣ ನೀಡುವ ನಾನಾ ರೀತಿಯ ಅಭಿಪ್ರಾಯಗಳು ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಹೇಳಿಕೆಗಳು ಮಾಧ್ಯಮಗಳ ತುಂಬ ಹರಿದಾಡತೊಡಗಿವೆ.

## ಇನ್ನೂ ತುಸು ಹಿಂದೆ ನೋಡುವುದಾದರೆ

ರೋಹಿತ್ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಹಂಚಿಕೊಳ್ಳುತ್ತಿದ್ದ ಪೋಸ್ಟಗಳನ್ನು ಗಮನಿಸಿದರೆ ವಿಶ್ವವಿದ್ಯಾಲದ ಹೊಸಿಲು ದಾಟಿದ್ದುನಿಂದ ಆತನ ವೈಚಾರಿಕ ಒಲವು ಕ್ರಮೇಣ ಬದಲಾದದ್ದು ಕಂಡುಬರುತ್ತದೆ.

2010ರಲ್ಲಿ ಹೈದರಾವಾಬಾದಿ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದ ಆತ ಪ್ರಸಿದ್ಧ ವಿಜ್ಞಾನ ಬರಹಗಾರ ಕಾರ್ಲ್ ಸಾಗನ್‌ನಂತೆ ಲೇಖಕನಾಗಬೇಕೆಂದು ಬಯಸಿದ್ದ. ಇವನ ಆದರ್ಶ ಕಾರ್ಲ್ ಸಾಗನ್ ಹಿಂದೂ ಸಂಸ್ಕೃತಿಯ ಬಗ್ಗೆ ಅಪಾರ ಗೌರವ ಉಳ್ಳವನಾಗಿದ್ದ ಎನ್ನುವುದು ಗಮನಿಸಬೇಕಾದ ಅಂಶ.

ನಂತರದ ದಿನಗಳಲ್ಲಿ ಸ್ವಾಮಿ ವಿವೇಕಾನಂದರಿಂದ ಪ್ರೇರಣೆ ಪಡೆದದ್ದು, ಭಾರತೀಯ ಹಬ್ಬಹರಿದಿನಗಳನ್ನು ಹೊಗಳಿ ಪಾಶ್ಚಾತ್ಯ ಪದ್ಧತಿಯನ್ನು ತಿರಸ್ಕರಿಸುವಂತಹ, ಇತರ ಮತಗಳ ಪವಿತ್ರ ಗ್ರಂಥಗಳನ್ನು ಪ್ರಶ್ನಿಸುವ ವಿಷಯಗಳನ್ನು ಆತ ಪೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದ. ಭಾರತೀಯ ಸೇನೆಯನ್ನು ಗೀತೆಗಳನ್ನಷ್ಟೇ ಅಲ್ಲ ನರೇಂದ್ರ ಮೋದಿಯವರನ್ನು ಬೆಂಬಲಿಸುವ ಪೋಸ್ಟ್‌ಗಳೂ ಆತನ ಫೇಸ್‌ಬುಕ್ ಗೋಡೆಯಲ್ಲಿ ಕಂಡುಬಂದವು.

ಅಲ್ಲಿಂದ ಆಚೆಗೆ ಆತನ ವಿಚಾರಗಳಲ್ಲಿ ಅನೇಕ ಯುವಕರ ಬದುಕಿನಲ್ಲಿ ಆದಂತೆ ಭ್ರಷ್ಟಾಚಾರ ವಿರೋಧಿ ಆಂದೋಲನ ಹಾಗೂ ಅದರ ಮುಂದುವರಿದ ಆಮ್ ಆದ್ಮಿ ಪಾರ್ಟಿ ಪ್ರವೇಶವಾಯಿತು. ಅಂದಿನಿಂದ ಗಮನಿಸಿದರೆ ಆಶಾವಾದದ ಬದಲು ಗೊಂದಲ ಹತಾಶೆಯ ಒಂದು ರೀತಿಯ ಋಣಾತ್ಮಕ ಮನೋವೃತ್ತಿ ಅವನಲ್ಲಿ ಕಂಡುಬರುತ್ತದೆ. ನಂತರ ಕಾಂಗ್ರೇಸ್‌ನ ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐಯ ಸಂಪರ್ಕಕ್ಕೆ ಬಂದ ಆತ ಅಲ್ಲಿಯೂ ನಿಲ್ಲದೇ ಮತಾಂಧ ಓವೈಸಿಯಿಂದ ಬೆಂಬಲ ಪಡೆದ ಅಂಬೇಡ್ಕರ್ ಸ್ಟೂಡೆಂಟ್ ಅಸೋಸಿಯೇಷನ್ ಎನ್ನುವ ಸಂಘಟನೆಯನ್ನು ಸೇರಿದ. ಉನ್ನತ ಕನಸುಗಳನ್ನಿಟ್ಟುಕೊಂಡು, ಸಾಮಾಜಿಕ ಕಳಕಳಿ, ದೇಶಭಕ್ತಿ ಹೊಂದಿದ್ದ ಆತ ಏಕಾಏಕಿ ಹಿಂದು ಪದ್ಧತಿಗಳನ್ನು ಗೇಲಿಮಾಡ ತೊಡಗಿದ, ಆರೆಸ್ಸೆಸ್, ವಿದ್ಯಾರ್ಥಿ ಪರಿಷತ್‌ಗಳನ್ನು ದ್ವೇಷಿಸತೊಡಗಿದ. ಆತನಿಗೇ ಪ್ರೇರಣೆಯಾಗಿದ್ದ ವಿವೇಕಾನಂದ ಜಾತಿವಾದಿಯಾಗಿ, ಸ್ತ್ರೀವಿರೋಧಿಯಾಗಿ ಕಾಣತೊಡಗಿದರು. ಎಷ್ಟರಮಟ್ಟಿಗೆ ಎಂದರೆ ಮುಂಬೈ ಬಾಂಬ್ ಸ್ಫೋಟದ ರೂವಾರಿ ಭಯೋತ್ಪಾದಕ ಯಾಕೂಬ್ ಮೆಮನ್‌ಗೆ ಸರ್ವೋಚ್ಚ ನ್ಯಾಯಾಲಯ ನೀಡಿದ ಗಲ್ಲು ಶಿಕ್ಷೆಯನ್ನು ವಿರೋಧಿಸಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಷ್ಟು, “ಎಷ್ಟು ಯಾಕೂಬ್‌ನನ್ನು ಸಾಯಿಸುವಿರಿ, ಪ್ರತಿ ಮನೆಯಲ್ಲೂಒಬ್ಬ ಯಾಕೂಬ್ ಹುಟ್ಟಿಕೊಳ್ಳುತ್ತಾನೆ” ಎಂದು ಘೋಷಣೆ ಕೂಗುವಷ್ಟರ ಮಟ್ಟಿಗೆ ಆತ ಬದಲಾದ.

ಇಂತಹ ವೈಚಾರಿಕ ಪರಿವರ್ತನೆ ಹೇಗೆ ಆಯಿತು? ಆಮ್ ಆದ್ಮಿ ಪಾರ್ಟಿಯಿಂದ ಆತನ ಮನಸ್ಸಿನಲ್ಲಿ ಋಣಾತ್ಮಕತೆ ಬಿತ್ತಲ್ಪಟ್ಟು, ಎಡಪಂಥೀಯ ವಿಚಾರದಿಂದ ಪೋಷಣೆಗೊಂಡು, ಮತಾಂಧ ಓವೈಸಿಯಂತಹವರಿಂದ ಅದಕ್ಕೆ ಇನ್ನೂ ಇಂಬೂ ದೊರೆತು ದುರ್ಬಳಕೆಗೆ ಒಳಗಾಯಿತೇ? ಎನ್ನುವುದು ಸಹಜವಾಗಿ ಏಳುವ ಪ್ರಶ್ನೆ.

ಜೊತೆಗೆ ಇಷ್ಟೊಂದು ಹೋರಾಟದ ಪ್ರವೃತ್ತಿ ಬೆಳೆಸಿಕೊಂಡಿದ್ದ ರೋಹಿತ್ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ದುರ್ಬಲನಾಗಿದ್ದು ಏಕೆ? ಆತನ ಮರಣ ಪತ್ರದಲ್ಲಿ ಯಾರನ್ನೂ ಯಾವ ವಿರೋಧೀ ಸಂಘಟನೆಯನ್ನೂ ಆತ ದೂಷಿಸಿಲ್ಲ. ಆದರೆ ಬರೆದು ನಂತರ ಹೊಡೆದು ಹಾಕಿದ ಒಂದೆರಡು ಸಾಲಿನ ವಿಷಯ ತುಂಬ ಗಂಭೀರವಾಗಿದೆ. ಆತನ ಮರಣ ಪತ್ರದಲ್ಲಿ ಹೇಳಿರುವಂತೆ “ಎಎಸ್‌ಎ, ಎಸ್‌ಎಫ್‌ಐ ಯಾವುದೇ ಆಗಿರಲಿ ಎಲ್ಲವೂ ಕೇವಲ ತಮಗಾಗಿ ಮಾತ್ರ ಇವೆ. ಅಧಿಕಾರವನ್ನು ಪಡೆಯಲು, ಪ್ರಸಿದ್ಧಿಗೆ ಬರಲು ಅಥವಾ ತಮ್ಮ ಮಹತ್ವವನ್ನು ಕಾಯ್ದುಕೊಳ್ಳಲು....” ಎಂದಿದೆ. ಅಂದರೆ ಆತನಿಗೆ ಈ ಸಂಘಟನೆಗಳಿಂದ ಭ್ರಮನಿರಸನವಾಗಿರಬಹುದು. ತಾನು ನಂಬಿರುವುದು ಮಿಥ್ಯೆ ಎಂದು ಅರಿವಾಗಿರಬಹುದು.

ಅಷ್ಟಕ್ಕೂ ರೋಹಿತ್ ವೇಮುಲನನ್ನು ಸಾಯಿಸಿದವರು ಯಾರೂ? ಸ್ವಯಂ ಆತನೇ? ಆತನ ವೈಚಾರಿಕತೆಯೇ? ಅಥವಾ ಆತ ಹಿಡಿದ ಸಿದ್ಧಾಂತವೇ?

1ನೇ ಪುಟದಿಂದ

# ‘ಆಜಾದ್ ಹೂಂ, ಆಜಾದ್ ಹೀ ರಹೂಂಗಾ!’

ಸುತ್ತಲಿನ ದಟ್ಟವಾದ ಕಾಡಿನಲ್ಲಿ ವಾಸವಾಗಿದ್ದ ಕಾಡುಜನ ಭಿಲ್ಲರಿಗೂ ಚಂದ್ರಶೇಖರನಿಗೂ ಅಚ್ಚುಮೆಚ್ಚಿನ ಸ್ನೇಹ. ಅವನಿಗೆ ಕಾಡಿನಿಂದ ಸಿಹಿಯಾದ ಜೇನುತುಪ್ಪ ರುಚಿಯಾದ ಹಣ್ಣು ಹಂಪಲು ತಂದು ಕೊಡುತ್ತಿದ್ದರು. ಅವನನ್ನು ಕಾಡಿನ ಒಳಕ್ಕೆ ಕರೆದುಕೊಂಡು ಹೋಗಿ ಬಾಣ ಬಿಡುವುದನ್ನು ಕಲಿಸಿದರು. ಹುಲಿಗಳನ್ನು ಬೇಟೆಯಾಡಲು ಚಂದ್ರಶೇಖರ ಅವರ ಜೊತೆ ಹೋಗುತ್ತಿದ್ದ.

## ‘ಆಜಾದ್’ ಆದ ಚಂದ್ರಶೇಖರ ‘ತಿವಾರಿ’

ಚಂದ್ರಶೇಖರ ಮನೆಗೆ ಸಹಾಯ ಮಾಡಬೇಕೆಂದು ಓದು ನಿಲ್ಲಿಸಿ ಕೆಲಸಕ್ಕೆ ಸೇರಿದ. ಇನ್ನೂ ಹೆಚ್ಚು ಸಂಪಾದಿಸಬೇಕು ಎಂದು ಮುಂಬಯಿಗೆ ಹೋದ. ಅಲ್ಲಿ ಹಡಗಿನ ಬಂದರುಗಳಲ್ಲಿ ಮೂಟೆ ಹೊರುವ ಕೂಲಿಯಾಗಿ ದುಡಿದ. ಆದರೆ ಅವನಿಗೆ ಸಮಾಧಾನ ಸಿಗಲಿಲ್ಲ. ಚೆನ್ನಾಗಿ ಓದಿ ದೊಡ್ಡ ಸಂಸ್ಕೃತ ವಿದ್ವಾಂಸ ಆಗಬೇಕು ಎನ್ನುವ ಆಸೆ ಇತ್ತು. ಅದಕ್ಕಾಗಿ ಮುಂಬಯಿ ತೊರೆದು ಕಾಶಿಗೆ ಹೋಗಿ ಸಂಸ್ಕೃತ ಪಾಠ ಶಾಲೆಯಲ್ಲಿ ಸೇರಿ ವಿದ್ಯಾಭ್ಯಾಸ ಪ್ರಾರಂಭಿಸಿದ.

ಅದು 1921ನೇ ಇಸವಿ. ಆಗ ನಮ್ಮ ದೇಶದಲ್ಲಿ ಗಾಂಧಿ ಮುಂತಾದವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಿತ್ತು. ಆ ಹೋರಾಟದ ಒಂದು ಅಂಗವಾಗಿ ‘ಅಸಹಕಾರ ಆಂದೋಲನ’ ಪ್ರಾರಂಭವಾಯಿತು. ಅಸಹಕಾರ ಆಂದೋಲನ ಎಂದರೆ ಆಂಗ್ಲರ ಸರಕಾರದೊಂದಿಗೆ ಸಹಕಾರ ಮಾಡದೆ ಇರುವುದು. ಅವರ ನಡೆಸುತ್ತಿದ್ದ ಕೋರ್ಟು, ಕಛೇರಿ, ಶಾಲೆ, ಕಾಲೇಜುಗಳನ್ನು, ಬಹಿಷ್ಕರಿಸುವುದು. ಮೆರವಣಿಗೆ, ಸಭೆ, ಪ್ರದರ್ಶನ, ಹರತಾಳ ನಡೆಸಿ ಆಳ್ವಿಕೆಯನ್ನು ಪ್ರತಿಭಟಿಸಿ ಭಾರತವನ್ನು ಬಿಟ್ಟು ಹೋಗಬೇಕೆಂದು ಬಲವಾಗಿ ಒತ್ತಾಯಿಸುವುದು. ಕಾಶಿಯ ಗಂಗಾನದಿಯ ಸ್ನಾನ ಘಟ್ಟಗಳ ಮೇಲೆ ಓಡಾಡುತ್ತ ಚಂದ್ರಶೇಖರ ಯೋಚನೆ ಮಾಡಿದ: ‘ನಾನೂ ಆಂದೋಲನದಲ್ಲಿ ಸೇರಬೇಕು. ಭಾರತಮಾತೆಯ ಸೇವೆ ಮಾಡಬೇಕು’ ಎಂದು. ಅವನೂ ಆಂದೋಲನ ಸೇರಿದ.


ಒಂದು ದಿನ ಕಾಶಿಯಲ್ಲಿ ನಡೆಯುತ್ತಿದ್ದ ಒಂದು ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟಗಾರರ ಮೆರವಣಿಗೆ ಮೇಲೆ ಪೊಲೀಸರು ಲಾಠಿಛಾರ್ಜು ಮಾಡಿದರು. ತ್ರಿವರ್ಣಧ್ವಜ ಹಿಡಿದು ಮೆರವಣಿಗೆಯ ಮುಂಭಾಗದಲ್ಲಿದ್ದವರನ್ನು ಪೊಲೀಸ್ ಅಧಿಕಾರಿಯೊಬ್ಬ ಸಿಕ್ಕಾಪಟ್ಟೆ ಹೊಡೆಯುತ್ತಿದ್ದ. ದೂರದಿಂದ ಈ ದೃಶ್ಯವನ್ನು ನೋಡಿದ ಚಂದ್ರಶೇಖರನ ಮೈ ಎಲ್ಲ ಬೆಂಕಿ ಆಯಿತು. ಆ ಪೊಲೀಸ್ ಅಧಿಕಾರಿಗೆ ಗುರಿ ಇಟ್ಟು ಕಲ್ಲು ಎಸೆದ. ಅದು ರೊಂಯ್ ಅಂತ ಬಂದು ಠಪ್ಪಂತ ಪೊಲೀಸ್ ಅಧಿಕಾರಿ ಹಣೆಗೆ ಬಡಿಯಿತು. ಪೊಲೀಸರು ಅವನನ್ನು ಅಟ್ಟಿಸಿಕೊಂಡು ಬಂದರು. ಪೋಲೀಸರಿಗೆ ಚೆನ್ನಾಗಿ ಸುಸ್ತು ಹೊಡೆಸಿದ ಮೇಲೆ ಸಿಕ್ಕಿಬಿದ್ದ.

ಮರುದಿನ ನ್ಯಾಯಾಲಯದಲ್ಲಿ ಅವನನ್ನು ಹಾಜರು ಮಾಡಿದರು. ಅಲ್ಲಿನ ನ್ಯಾಯಾಧೀಶ ಚಂದ್ರಶೇಖರನನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಾ ಅಬ್ಬರಿಸಿದ. “ಹೇಳೋ, ಏನೋ ನಿನ್ನ ಹೆಸರು?”

“ನನ್ನ ಹೆಸರು, ನನ್ನ ಹೆಸರು ಆಜಾದ್!” ಎಂದು ಗಟ್ಟಿಯಾಗಿ ಗರ್ಜಿಸಿದ. ಅಜಾದ್ ಎಂದರೆ ‘ಸ್ವತಂತ್ರ’ ಎಂದರ್ಥ. ನಾನು ಯಾರಿಗೂ ಗುಲಾಮನಲ್ಲ ಎಂದು. ನ್ಯಾಯಾಧೀಶ ಇನ್ನೊಂದು ಪ್ರಶ್ನೆ ಕೇಳಿದ:

“ಏನು ನಿನ್ನ ಅಪ್ಪನ ಹೆಸರು?”
“ಸ್ವಾಧೀನತೆ”
“ನಿನ್ನ ವಿಳಾಸ?”
“ಸೆರೆಮನೆ!”

ಒಂದೊಂದು ಉತ್ತರವೂ ಗುಂಡು ಹೊಡೆದಂತೆ ಹೊರಬಂತು. ಆ ದುಷ್ಟ ನ್ಯಾಯಾಧೀಶನಿಗೆ ದಿಟ್ಟ ಉತ್ತರ ಕೊಟ್ಟ ಪುಟ್ಟ ಬಾಲಕನನ್ನು ನೋಡಿ ಅಲ್ಲಿದ್ದವರೆಲ್ಲ ಖುಷಿಪಟ್ಟರು. ಅಬ್ಬಾ, ಎಂಥ ಎದೆಗಾರ ಹುಡುಗ ಎಂದು ಮನಸಾರೆ ಕೊಂಡಾಡಿದರು. ಅವತ್ತಿನಿಂದ ಅವನ ಹೆಸರು ‘ಚಂದ್ರಶೇಖರ ಆಜಾದ್’ ಆಗಿ ಹೋಯಿತು.




ಆಜಾದ್‌ನ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕೇ?

ಭಾರತಮಾತೆಗೆ ತನ್ನ ರಕ್ತದಿಂದಲೇ ಅಭಿಷೇಕ ಮಾಡಿದ ಅಜೇಯ ಸೇನಾನಿ ಚಂದ್ರಶೇಖರ ಆಜಾದ್. ಆತನ ಜೀವನ ಕಥೆ “ಅಜೇಯ” ದೇಶಭಕ್ತ ಕ್ರಾಂತಿಕಾರಿಗಳ ಕುರಿತ ಬರಹಕ್ಕಾಗಿಯೇ ಮುಡಿಪಾಗಿರುವ ಬಾಬು ಕೃಷ್ಣಮೂರ್ತಿಯವರ ಲೇಖನಿಯಿಂದ ಮೂಡಿದೆ. ಇಂದಿನ ಯುವಪೀಳಿಗೆ ಓದಲೇಬೇಕಾದ ಕೃತಿ ಇದು.
ಸಂಪರ್ಕ : 080–26612730

ಆಜಾದನಿಗೆ 12 ಛಡಿ ಏಟಿನ ಶಿಕ್ಷೆ ವಿಧಿಸಲಾಯಿತು. ಚರ್ಮ ಕಿತ್ತು ಬರುತ್ತಿದ್ದರೂ ವಂದೇ ಮಾತರಂ ಎಂದು ಘೋಷಣೆ ಕೂಗುತ್ತ ಪ್ರಾಣ ಹೋಗುವ ಛಡಿ ಏಟಿಗೆ ಚಂದ್ರಶೇಖರ ಮೈಯೊಡ್ಡಿದ. ಇನ್ನೆಂದೂ ಬ್ರಿಟಿಷರ ಕೈಗೆ ಸಿಗುವುದಿಲ್ಲ “ಮೈ ಆಜಾದ್ ಹೂಂ, ಆಜಾದ್ ಹೀ ರಹೂಂಗಾ” ಎಂದು ಅಂದೇ ಶಪಥ ಮಾಡಿದ.

## ಪೊಲೀಸ್ ಠಾಣೆಗೆ ಭಿತ್ತಿಪತ್ರ

ಆಜಾದ್ ಬಲು ಚೂಟಿ ಹುಡುಗ. ಒಮ್ಮೆ ಸರಕಾರ ವಿರೋಧಿ ಭಿತ್ತಿಪತ್ರವನ್ನು ಕಾಶಿಯಲ್ಲೆಡೆ ಅಂಟಿಸುವ ಚಳವಳಿ ಯೋಜಿಸಲಾಗಿತ್ತು. “ನಾನು ಬೇಕಾದರೆ ಅದನ್ನು ಪೊಲೀಸ್ ಠಾಣೆಯ ಮೇಲೆ ಹಚ್ಚಿಬರುತ್ತೇನೆ” ಎಂದ ಆಜಾದ್. ಅದನ್ನು ಕೇಳಿ ಎಲ್ಲರಿಗೂ ಆಚ್ಚರಿ.

ಆಜಾದ್, ಭಿತ್ತಿಪತ್ರದ ಎರಡೂ ಕಡೆ ಅಂಟು ಹಚ್ಚಿ ತನ್ನ ಬೆನ್ನಿಗೆ ಅದನ್ನು ಅಂಟಿಸಿಕೊಂಡ. ಪೊಲೀಸ್ ಠಾಣೆಗೆ ಹೋದ. ಕಂಬದ ಬಳಿ ನಿಂತಿದ್ದ ಪೊಲೀಸ್ ಪೇದೆಯ ಜೊತೆ ಕುಶಲ ಸಂಭಾಷಣೆ ನಡೆಸುತ್ತಾ ತನ್ನ ಬೆನ್ನನ್ನು ಕಂಬಕ್ಕೆ ಉಜ್ಜುತ್ತಾ ನಿಂತುಕೊಂಡ. ಭಿತ್ತಿಪತ್ರ ಕಂಬಕ್ಕೆ ಅಂಟಿಕೊಂಡಿತು. ಅಜಾದ್ ಪೊಲೀಸ್ ಪೇದೆಗೆ ನಮಸ್ಕಾರ ಹೇಳಿ ಅಲ್ಲಿಂದ ಕಂಬಿಕಿತ್ತ. ರಸ್ತೆಯಲ್ಲಿ ಹೋಗುತ್ತಿದ್ದ ಜನರಿಗೆಲ್ಲ ಪೊಲೀಸ್ ಠಾಣೆಯ ಮೇಲೆ ಸರ್ಕಾರ ವಿರೋಧಿ ಭಿತ್ತಿ ಪತ್ರ ನೋಡಿ ಆಶ್ಚರ್ಯವೋ ಆಶ್ಚರ್ಯ.

## ಬಿಸ್ಮಿಲ್ಲರ ಶಿಷ್ಯ :

16ರ ಹರೆಯದಲ್ಲಿಯೇ ಆಜಾದ್ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರನಾದ. ಆಗ ಹಿಂದುಸ್ತಾನ್ ರಿಪಬ್ಲಿಕನ್ ಆರ್ಮಿ ಎಂಬ ಕ್ರಾಂತಿಕಾರಿ ಸಂಸ್ಥೆ ಇತ್ತು. ರಾಮಪ್ರಸಾದ್ ಬಿಸ್ಮಿಲ್ ಎಂಬ ಧೀರರು ಅದಕ್ಕೆ ನಾಯಕರು. ಆಜಾದ್ ಅವರ ಗುಂಪನ್ನು ಸೇರಿದ. ಅಲ್ಲಿ ಕ್ರಾಂತಿ ಚಟುವಟಿಕೆಗಳನ್ನು ನಡೆಸುವ ಬಗೆಗೆ ಕಲಿತ. ಹಿಂದುಸ್ತಾನ್ ರಿಪಬ್ಲಿಕನ್ ಆರ್ಮಿಗೆ ಬಂದೂಕು, ಪಿಸ್ತೂಲು, ಕಾಡತೂಸು ಮುಂತಾದವು ಬೇಕಾಗಿತ್ತು. ಅದಕ್ಕೆ ಹಣ ಎಲ್ಲಿಂದ ತರುವುದು? ಬಿಸ್ಮಿಲ್ಲರ ನೇತೃತ್ವದಲ್ಲಿ ಒಂಬತ್ತು ಜನರ ದಂಡು ಸಿದ್ಧವಾಯಿತು. ಅದರಲ್ಲಿ ಆಜಾದನೂ ಒಬ್ಬ.

1925ರ ಆಗಸ್ಟ್ 9ರಂದು ಉತ್ತರಪ್ರದೇಶದ ರಾಜಧಾನಿ ಲಕ್ನೋ ಬಳಿಯ ಕಾಕೋರಿ ಎಂಬ ರೈಲು ನಿಲ್ದಾಣದ ಹತ್ತಿರ ರೈಲು ನಿಲ್ಲಿಸಿ ಅದರಲ್ಲಿ ರವಾನೆಯಾಗುತ್ತಿದ್ದ ಸರಕಾರಿ ಖಜಾನೆಯನ್ನು ಕ್ರಾಂತಿಕಾರಿಗಳು ಲೂಟಿ ಮಾಡಿದರು. ಆದರೆ ಪೊಲೀಸರು ಬೇಗ ಎಚ್ಚರಗೊಂಡು ಎಲ್ಲರನ್ನೂ ಬಂಧಿಸಿದರು. ಬಿಸ್ಮಿಲ್ಲರೂ ಸಿಕ್ಕಿಬಿದ್ದರು. ಪೊಲೀಸರು ತಿಪ್ಪರಲಾಗ ಹಾಕಿದರೂ ಹಿಡಿಯಲು ಆಗದೆ ಹೋದದ್ದು ಒಬನನ್ನೇ, ಅವನೇ ಚಂದ್ರಶೇಖರ ಆಜಾದ್.

ಸಂನ್ಯಾಸಿಯಂತೆ, ಕೂಲಿಯಂತೆ, ಸಾಹುಕಾರನಂತೆ, ಡ್ರೈವರನಂತೆ, ಕೊನೆಗೆ ಪೊಲೀಸರಂತೆ ವೇಷ ಧರಿಸಿಕೊಂಡು ಪೊಲೀಸರಿಗೆ, ಗುಪ್ತಚಾರರಿಗೆ ಮಂಕುಬೂದಿ ಎರಚುತ್ತಾ ಆಜಾದ್ ತಪ್ಪಿಸಿಕೊಳ್ಳುತ್ತಿದ್ದ. ಲಕ್ನೋ, ಕಾನಪುರ, ಝೂನ್ಸಿ, ದಿಲ್ಲಿ, ಲಾಹೋರ್, ಕಾಶಿ ಮುಂತಾದ ಕಡೆಯಲೆಲ್ಲ ಓಡಾಡುತ್ತಿದ್ದ.

## ಝೂನ್ಸಿಯಲ್ಲಿ ಆಜಾದ್

ಆಜಾದ್ ಝೂನ್ಸಿಯಲ್ಲಿ ತಲೆತಪ್ಪಿಸಿಕೊಂಡು, ಒಂದು ಮೋಟಾರ್ ಕಂಪನಿಯಲ್ಲಿ ಸೇರಿಕೊಂಡ. ಅವನಿಗೆ ‘ಡ್ರೈವಿಂಗ್ ಲೈಸೆನ್ಸ್’ ಬೇಕಾಗಿತ್ತು. ಮೊದಲೇ ಅವನು ಪೊಲೀಸರು ಹುಡುಕುತ್ತಿದ್ದ ವ್ಯಕ್ತಿ. ಲೈಸೆನ್ಸ್ ಕೊಡಬೇಕಾದವನು ಸ್ವತಃ ಪೊಲೀಸ್ ಸೂಪರಿಂಟೆಂಡೆಂಟ್! ಸಮಸ್ಯೆ ಬಹಳ ದೊಡ್ಡದು. ಆದರೆ ಆಜಾದನಿಗೇನೂ ಅದು ಬಿಡಿಸಲಾಗದ್ದಲ್ಲ. ಸೂಪರಿಂಟೆಂಡೆಂಟ್‌ನಿಗೆ ಸ್ವಲ್ಪವೂ ಸುಳಿವು ಸಿಗದ ಹಾಗೆ ನಾಟಕ ಮಾಡಿ ಅವನ ಕೈಯಿಂದಲೇ ಲೈಸೆನ್ಸ್ ಗಿಟ್ಟಿಸಿದ! ಅಷ್ಟೆ ಅಲ್ಲ, ಆಜಾದನ ವಾಹನ ಚಾಲನೆಯ ಸಾಮರ್ಥ್ಯ ಕಂಡು ಅವನಿಗೆ ಮೆಚ್ಚುಗೆಯಾಯಿತು. ತನ್ನ ಕಾರನ್ನು ನಡೆಸಲು ಆಗಾಗ ಆಜಾದನನ್ನೇ ಕರೆಸುತ್ತಿದ್ದ, ಆ ಪೊಲೀಸ್ ಅಧಿಕಾರಿ!

ಆಜಾದನಿಗೆ ಪೊಲೀಸರನ್ನು ಕೆಣಕಿ ಆಟ ಆಡಿಸುವುದು ಎಂದರೆ ಬಹಳ ಖುಷಿ. ಅವರನ್ನೇ ಸ್ಪರ್ಧೆಗಳಿಗೆ ಕರೆಯುವನು. ಅವರೊಂದಿಗೇ ಪಗಡೆ ಆಡುವನು. ಪೊಲೀಸ್ ಠಾಣೆಗಳಿಗೆ ನುಗ್ಗಿ ಅವನನ್ನು ಹಿಡಿಯಬೇಕಾಗಿದ್ದ ಪೊಲೀಸರೊಂದಿಗೆ ಹರಟೆ ಹೊಡೆಯುತ್ತಿದ್ದ.

## ಆದರ್ಶ ಕ್ರಾಂತಿಕಾರಿ

ಅವನ ಸಂಪೂರ್ಣ ಜೀವನ ರಾಷ್ಟ್ರಸೇವೆಗೆ ಮೀಸಲು. ಸ್ವಂತದ ಚಿಂತೆ ಸಾಸಿವೆಯಷ್ಟೂ ಅವನಿಗಿರಲಿಲ್ಲ. ಅವನ ಸಂಸ್ಥೆಗಾಗಿ ಸಂಗ್ರಹಿಸಿದ ಹಣ ಎಂದರೆ ರಾಷ್ಟ್ರದ ಹಣ ಎಂದೇ ಭಾವಿಸುತ್ತಿದ್ದ. ರಾಷ್ಟ್ರದ ಸ್ವತ್ತು ಸ್ವಂತಕ್ಕೆ ಉಪಯೋಗಿಸುವುದು ಅಕ್ಷಮ್ಯ ಅಪರಾಧ ಎಂದು ನಂಬಿದ್ದ.

ಆಜಾದ್ ಮನೆ ತೊರೆದು ಹತ್ತು ವರ್ಷಗಳೇ ಕಳೆದಿತ್ತು. ಮುದಿ ತಂದೆತಾಯಿಯನ್ನು ಕಾಣಲು ಭಾವರಾಗೆ ಹೋಗಿದ್ದ. ಆ ಮುದಿ ದಂಪತಿ ಬಹಳ ಬಡತನದಲ್ಲಿ ನರಳಾಡುತ್ತಿದ್ದರು. ಒಪ್ಪತ್ತು ಊಟ ಸಿಕ್ಕರೆ, ಇನ್ನು ಮೂರು ನಾಲ್ಕು ದಿನ ಉಪವಾಸ. ಮೈಮುಚ್ಚಲು ಚಿಂದಿಯಾಗಿ ಅಲ್ಲಲ್ಲಿ ತೇಪೆ ಹಾಕಿದ ಸೀರೆ, ಪಂಚೆಯೇ ಗತಿ. ಜೊತೆಗೆ ಆಗಾಗ ರೋಗರುಜಿನ ಬೇರೆ. ಇದನ್ನು ಅರಿತ ಆಜಾದನ ಕೆಲವು ಹಿರಿಯ ಹಿತೈಷಿಗಳು ಆಜಾದನಂಥ ಕ್ರಾಂತಿ ಶಿರೋಮಣಿಯನ್ನು ದೇಶಕ್ಕೆ ನೀಡಿದ ಆ ವೃದ್ಧರಿಗಾಗಿ ಸ್ವಲ್ಪ ಹಣ ಸಂಗ್ರಹಿಸಿದರು. ಆ ಸುದ್ದಿ ಆಜಾದನಿಗೆ ತಿಳಿಯಿತು. ಅವರನ್ನು ಕರೆದು ಅವರಿಂದ ಆ ಹಣವನ್ನು ಕಸಿದುಕೊಂಡು ಹೇಳಿದ: “ಸ್ವಾಮಿ, ನನ್ನ ತಂದೆ–ತಾಯಿಯರಿಗಾಗಿ ಹಣ ಸಂಗ್ರಹಿಸಿದ್ದೀರಿ. ನನ್ನ ಹೆಸರನ್ನೂ ಬಳಸಿದ್ದೀರಿ. ನನ್ನದು ರಾಷ್ಟ್ರಕ್ಕೆ ಮುಡುಪಿಟ್ಟ ಬಾಳು. ನನ್ನ ಹೆಸರಿನಲ್ಲಿ ಸಂಗ್ರಹಿಸಿದ್ದೆಲ್ಲ ರಾಷ್ಟ್ರಕ್ಕೆ ಸೇರಬೇಕೇ ಹೊರತು ಮನೆ ಖರ್ಚಿಗೆ ಒಂದು ಚಿಕ್ಕಾಸು ಖರ್ಚಾಗಬಾರದು” ಎಂದ. ಅಂತಹ ತ್ಯಾಗಮಯೀ, ಸಮರ್ಪಿತ ಜೀವನ ಆಜಾದ್‌ನದ್ದು.

ಆಂಗ್ಲ ಶಾಸನವನ್ನೇ ನಡುಗಿಸಿದ ಆಜಾದ್‌ನ ಸಾಹಸಗಳು ಅನೇಕ. ಆತನಿಂದ ಪ್ರೇರಣೆ ಪಡೆದ ನೂರಾರು ಕ್ರಾಂತಿಕಾರಿಗಳ ದಂಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿತು. ಬ್ರಿಟಿಷರ ಎಂಜಲ ಕಾಸಿಗೆ ಬಲಿಯಾದ ಸಹಪಾಠಿ ಕ್ರಾಂತಿಕಾರಿಯೊಬ್ಬನ ಮೋಸದಿಂದ ಪೋಲೀಸರು ಆಜಾದ್‌ನ ಬೆನ್ನುಹತ್ತಿದರು. 1931 ಫೆಬ್ರುವರಿ 27ರಂದು ಅಲಾಹಾಬಾದಿನ ಆಲ್ಫ್ರೆಡ್ ಪಾರ್ಕಿನಲ್ಲಿ ಎಂಭತ್ತು ಮಂದಿ ಪೋಲೀಸರನ್ನು ಏಕಾಂಗಿಯಾಗಿ ಎದುರಿಸಿದ. ಎಂದಿಗೂ ಬ್ರಿಟಿಷರ ಕೈಗೆ ಸಿಗುವುದಿಲ್ಲ ಎಂದು ಶಪಥಗೈದಿದ್ದ ಆಜಾದ್ ತನ್ನ ಪಿಸ್ತೂಲಿನ ಕೊನೆಯ ಗುಂಡನ್ನು ತನ್ನ ತಲೆಗೆ ಹೊಡೆದುಕೊಂಡು ಮಾತೃಭೂಮಿಯ ಮಡಿಲ್ಲಿ ಹುತಾತ್ಮನಾದ. ಆಗ ಆತನ ವಯಸ್ಸು ಕೇವಲ ಇಪ್ಪತ್ತನಾಲ್ಕು! ಇಂಥಹ ಅಪ್ರತಿಮ ಸಾಹಸಿ ದೇಶಭಕ್ತನನ್ನು ಹಡೆದ ತಾಯಿ ಭಾರತಿ ಧನ್ಯಳು.

# ಗೊಲ್ಲರಹೊಸಹಳ್ಳಿಯ ತರಕಾರಿ ಗಣೇಶಪ್ಪ



ನೆಲದ ಮಾತು

ಅಕ್ಕಪಕ್ಕದ ಹಳ್ಳಿಗಳಲ್ಲಿ ‘ತರಕಾರಿ ಗಣೇಶಪ್ಪ’ ಎಂದೇ ಕರೆಸಿಕೊಳ್ಳುವ ರೈತರಾದ ಕೆ.ಜಿ. ಗಣೇಶ ನೈಸರ್ಗಿಕ ಪದ್ಧತಿಯಲ್ಲಿ ಹಲವು ಪ್ರಯೋಗ ಮಾಡಿದ ಸಾಧಕ ಕೃಷಿಕರು. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಬಾಗೂರು ಸಮೀಪದ ಗೊಲ್ಲರಹೊಸಹಳ್ಳಿಯ 4 ಎಕರೆ ಭೂಮಿ ಇವರ ಸಾಧನೆಗೆ ಸಾಕ್ಷಿಯಾಗಿ ನಗುತ್ತಿದೆ.

ನಗರದ ಬದುಕು ಮೋಹಿಸಿ ಮೈಸೂರಿಗೆ ಹೋಗಿದ್ದ ಗಣೇಶ್ ಹಳ್ಳಿಗೆ ಬಂದಿದ್ದು ಒಂದು ಕಥೆ. ಐಟಿಐ ಓದಿರುವ ಅವರು ಖಾಸಗಿ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ಕೆಲಸವನ್ನು ಮಾಡುತ್ತಿದ್ದರು. ಕಾರ್ಖಾನೆ ಮುಚ್ಚಿ ಹೋದ ನಂತರ, ನಗರ ಜೀವನಕ್ಕೆ ರೋಸಿ, ನೆಮ್ಮದಿ ಹುಡುಕುತ್ತಾ ಹಳ್ಳಿ ಹಾದಿ ಹಿಡಿದರು. ಬೇಸಾಯ ಮಾಡಿಯೇ ಬದುಕು ಸಾಗಿಸಬೇಕು ಎಂದು ಗಟ್ಟಿಯಾಗಿ ನಿರ್ಧರಿಸಿದ್ದು 1999ರಲ್ಲಿ. ಆಗ ಅವರಿಗೆ 32 ವರ್ಷ ದಾಟಿತ್ತು. ಎಂದಿಗೂ ಜಮೀನಿಗಿಳಿದು ಮಣ್ಣು ಮುಟ್ಟದ ಈ ವ್ಯಕ್ತಿ ಬೇಸಾಯ ಮಾಡುತ್ತೇನೆ ಎಂದಾಗ ಗೆಳೆಯರು ನಕ್ಕರು. ಆರಂಭದಲ್ಲಿ ಹೆಚ್ಚು ಇಳುವರಿ ಸಿಗಬೇಕು ಎಂದು ವಿಪರೀತ ರಾಸಾಯನಿಕ ಗೊಬ್ಬರ–ಕೀಟನಾಶಕ ಚೆಲ್ಲಿದರು. ಭೂಮಿ ಸತ್ವಹೀನವಾಗಿ, ಬ್ಯಾಂಕ್‌ನಲ್ಲಿ ಸಾಲ ಏರಿದಾಗ ಅವರ ಹೆಂಡತಿಗೆ ‘ಏನೋ ಕ್ರಮ ತಪ್ಪುತ್ತಿದೆ’ ಎನಿಸಿತು. ಪತ್ನಿ ಸುಧಾ ಅವರ ಮಾತು ಕೇಳಿ ನೈಸರ್ಗಿಕ ಸಹಜ ಕೃಷಿ ಪದ್ಧತಿಯ ಅಧ್ಯಯನ ಆರಂಭಿಸಿದರು. ಸುಭಾಷ್ ಪಾಳೇಕಾರ್ ಅವರ ಪುಸ್ತಕಗಳನ್ನು ಓದಿ, ಮನನ ಮಾಡಿ ಜಮೀನಿನಲ್ಲೂ ಅನುಷ್ಠಾನಕ್ಕೆ ತಂದರು.

**ಸಂಪೂರ್ಣ ಸ್ವಾವಲಂಬಿ:** ಜಮೀನಿನ ಮುಖ್ಯ ಒಳಸುರಿಗಳಾದ ಬಿತ್ತನೆ ಬೀಜ, ಗೊಬ್ಬರ, ನೀರಿನ ವಿಚಾರದಲ್ಲಿ ಇವರು ಸ್ವಾವಲಂಬಿ. ಅಲಸಂದೆ, ಹೀರೆ, ಭತ್ತ, ರಾಗಿ ಸೇರಿದಂತೆ ಎಲ್ಲ ಪ್ರಮುಖ ಬೆಳೆಗಳ ಬೀಜ ಸ್ವತಃ ಆರಿಸಿ, ತೆಗೆದಿಟ್ಟುಕೊಳ್ಳುತ್ತಾರೆ. ಎರಡು ನಾಡಹಸು, ಒಂದು ಎಮ್ಮೆ, 4 ಕರುಗಳ ಸೆಗಣಿಯಿಂದ ಸತ್ವಃ ಉತ್ಕೃಷ್ಟ ಗೊಬ್ಬರ ತಯಾರಿಸಿಕೊಳ್ಳುತ್ತಾರೆ. ಟಗರು, ಕೋಳಿ ಹಿಕ್ಕೆಗಳೂ ವ್ಯರ್ಥವಾಗುವುದಿಲ್ಲ. ತೋಟದ ಅಂಚಿನಲ್ಲಿರುವ ಗ್ಲಿರಿಸಿಡಿಯಾ ಸೊಪ್ಪಿನಿಂದ ಮುಚ್ಚಿಗೆ ಮಾಡುವುದರಿಂದ ನೆಲದ ಸತ್ವ ಮತ್ತು ತೇವಾಂಶ ದೀರ್ಘಕಾಲದವರೆಗೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. 4 ಎಕರೆ ತೋಟಕ್ಕೆ ನೀರು ಹಾಯಿಸಲು ಮುಕ್ಕಾಲು ಇಂಚು ಇಳುವರಿಯ ಬೋರ್‌ವೆಲ್ ಇದೆ. ಹನಿ ನೀರಾವರಿ ಪದ್ಧತಿಯಲ್ಲಿ ನೀರಿನೊಂದಿಗೆ 15 ದಿನಕ್ಕೊಮ್ಮೆ ಜೀವಾಮೃತ ಬೆರೆಸಿಕೊಡುತ್ತಾರೆ. ನಾಟಿ ಹಸುಗಳ ಗಂಜಲ ಸಂಗ್ರಹಿಸಿ, ಅದಕ್ಕೆ ನಾಲ್ಕರ ಪ್ರಮಾಣ ನೀರು ಬೆರೆಸಿ ಗಿಡಗಳಿಗೆ ಸಿಂಪಡಿಸಿ ಕೀಟಗಳ ಹಾವಳಿ ನಿಯಂತ್ರಿಸುತ್ತಾರೆ. ರಾಗಿ, ಭತ್ತ, ತೊಗರಿ, ಹೆಸರು, ಉದ್ದು, ಮೆಂತ್ಯ, ಹರಳು ಸೇರಿದಂತೆ 40ಕ್ಕೂ ಹೆಚ್ಚು ಬೆಳೆ ರೈತ ಗಣೇಶ ಅವರ ಜಮೀನಿನಲ್ಲಿದೆ. ಸಂಪರ್ಕ ಸಂಖ್ಯೆ: 8453504120.

ಸಂಪಾದಕೀಯ ಸಹಕಾರ: ಶ್ರೀಹರ್ಷಪೇರ್ಲ, ಸತ್ಯನಾರಾಯಣ ಶಾನುಭಾಗ, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀವತ್ಸ ಸಿ.ಎಂ., ಪ್ರತಾಪ ಕೊಡಂಚ, ಉದಯನ ಹೆಗಡೆ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

# ಅಯೋಧ್ಯೆಯಲ್ಲಿ ಮಂದಿರವಿತ್ತು

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸುವ ವಿಚಾರ ಮುನ್ನೆಲೆಗೆ ಬಂದಿರುವ ನಡುವೆಯೇ ಬಾಬ್ರಿ ಕಟ್ಟಡವಿದ್ದ ಸ್ಥಳದಲ್ಲಿ ದೇಗುಲದ ಅವಶೇಷ ಪತ್ತೆಯಾಗಿತ್ತು ಎಂಬುದನ್ನು ಪುರಾತತ್ವ ಇಲಾಖೆಯ ಮಾಜಿ ಪ್ರಾದೇಶಿಕ ನಿರ್ದೇಶಕ ಕೆ.ಕೆ. ಮೊಹಮ್ಮದ್ ಬಹಿರಂಗಪಡಿಸಿದ್ದಾರೆ. ಈ ಕುರಿತು ಪುಸ್ತಕವೊಂದರಲ್ಲಿ ಉಲ್ಲೇಖಿಸಿರುವ ಅವರು, 1976–77ರಲ್ಲಿ ಅಯೋಧ್ಯೆಯಲ್ಲಿ ನಡೆಸಲಾಗಿದ್ದ ಉತ್ಖನನದ ಸಂದರ್ಭ ಬಾಬ್ರಿ ಕಟ್ಟಡ ಇದ್ದ



ಸ್ಥಳದಲ್ಲಿ ದೇಗುಲದ 14 ಸ್ತಂಭ ಇರುವುದು ಗಮನಕ್ಕೆ ಬಂದಿತ್ತು. ಅವು ಸುಮಾರು 11 ಅಥವಾ 12ನೇ ಶತಮಾನದ್ದಾಗಿರಬಹುದು ಎಂದು ಅಂದಾಜಿಸಲಾಗಿತ್ತು. ದೇಗುಲದ ಅವಶೇಷದ ಮೇಲೆ ಮಸೀದಿ ನಿರ್ಮಿಸಲಾಗಿತ್ತು ಎಂಬುದಕ್ಕೆ ಇದುವೇ ಸಾಕ್ಷಿ. ಎಡಪಂಥೀಯ ಇತಿಹಾಸಕಾರರಾದ ರೋಮಿಲಾ ಥಾಪರ್, ಬಿಪಿನ್ ಚಂದ್ರ, ಎಸ್. ಗೋಪಾಲ್ ಮತ್ತಿತರರು ಮುಸ್ಲಿಮರ ಬ್ರೈನ್‌ವಾಷ್ ಮಾಡಿದ್ದಾರೆ. ಇವರಿಗೆ ಇರ್ಫಾನ್ ಹಬೀಬ್, ಆರ್.ಎಸ್. ಶರ್ಮಾ, ಡಿ.ಎನ್. ಝಾ, ಸೂರಜ್ ಬೆನ್ ಮತ್ತು ಅಖ್ತರ್ ಅಲಿ ಬೆಂಬಲ ನೀಡಿದ್ದಾರೆ. ಇಲ್ಲದೇ ಇರುತ್ತಿದ್ದರೆ ಅಯೋಧ್ಯೆ ವಿವಾದ ಎಂದೋ ಬಗೆಹರಿಯುತ್ತಿತ್ತು ಎಂದು ಮೊಹಮ್ಮದ್ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಈ ಹಿಂದೆ ಅಲಹಾಬಾದ್ ಹೈಕೋರ್ಟ್ ಕೂಡಾ ಅಯೋಧ್ಯೆಯಲ್ಲಿ ಬಾಬರೀ ಕಟ್ಟಡವಿದ್ದ ಜಾಗದಲ್ಲಿ ರಾಮಮಂದಿರವಿತ್ತು ಎಂದು ತೀರ್ಪು ನೀಡಿತ್ತು.



ಅಭಿವೃದ್ಧಿಯೇ ಕಾಣದಂತಿದ್ದ ಮಣಿಪುರದ ತಾಮೆಂಗ್ಲಾಂಗ್ ಜಿಲ್ಲೆಯಲ್ಲಿಂದು ವಾತಾವರಣ ಈಗ ಬದಲಾಗಿದೆ. ಸರ್ಕಾರ ಈ ಕನಸು ಕಂಡಿರಲಿಲ್ಲ ಎಂದಿಲ್ಲ. ಇಲ್ಲಿ ಒಂದು ರಸ್ತೆ ನಿರ್ಮಿಸಬೇಕು ಎಂದು 1982ರಲ್ಲಿಯೇ ಕೇಂದ್ರ ಸರ್ಕಾರ 100 ಕೋಟಿ ಬಿಡುಗಡೆ ಮಾಡಿತ್ತು. 30 ವರ್ಷಗಳೇ ಕಳೆದಿದ್ದರೂ ಆ ಕನಸು ನನಸಾಗಲೇ ಇಲ್ಲ. ಮಣಿಪುರ ರಾಜ್ಯವನ್ನು ಅಸ್ಸಾಂ, ನಾಗಾಲ್ಯಾಂಡ್ ರಾಜ್ಯಗಳೊಂದಿಗೆ ಬೆಸೆಯುವ ರಸ್ತೆಯಿಲ್ಲದಿರುವುದರಿಂದ ಗ್ರಾಮಸ್ತರು ಅನಾರೋಗ್ಯದ ಸಮಯದಲ್ಲಿ ಆಸ್ಪತ್ರೆಗೆ ದಾಖಲಾಗುವುದಕ್ಕೂ ಪರದಾಟ ಪಡುವಂತಹ ಸ್ಥಿತಿ ಅವರನ್ನು ಕಾಡುತ್ತಿತ್ತು. ಆಗ ಸ್ಥಳೀಯ ಜನರೇ ಸ್ವತಃ ತಮ್ಮ ಜಿಲ್ಲೆಯನ್ನು ಬದಲಾವಣೆಗೆ ಮುಂದಾದರು. ಅದೇ ಸಂದರ್ಭಕ್ಕೆ ಸರಿಯಾಗಿ ಅದೇ ಜಿಲ್ಲೆಯವರೂ ಸ್ಥಳೀಯ ಜೆಮೆ ಬುಡಕಟ್ಟಿಗೆ ಸೇರಿದ (ಈ ಬುಡಕಟ್ಟಿನ ಮೊದಲ ಐಎಎಸ್) ಆರ್ಮ್‌ಸ್ಟ್ರಾಂಗ್ ಪಾಮೆ ಎಂಬ ಐಎಎಸ್ ಅಧಿಕಾರಿ ಇವರ ಕೆಲಸಕ್ಕೆ ಕೈಜೋಡಿಸಿದರು. ಜನರೆಲ್ಲರೂ ಸೇರಿ ತಮ್ಮ ಊರುಗಳಲ್ಲಿನ ದಾರಿಗಳಲ್ಲಿ ಮುರಿದು ಬಿದ್ದಿದ್ದ ಮರಗಳನ್ನು ಹೊರಹಾಕುವುದರಿಂದ ಹಿಡಿದು, ಆ ದಾರಿಯನ್ನು ಸಮತಲಮಾಡಿ, ರಸ್ತೆ ನಿರ್ಮಿಸುವಲ್ಲಿ ಯಶಸ್ವಿಯಾದರು. ಜೊತೆಗೆ ಹೆಗ್ಗಳಿಕೆಯ ಸಂಗತಿಯೆಂದರೆ ಈ ರಸ್ತೆ ನಿರ್ಮಾಣ ಜಿಲ್ಲೆಯ ವಾಸಿಸುವವ ಜನರ ತಿಂಗಳು, ವರ್ಷದ ಸಂಬಳದಿಂದಲೇ ಆದದ್ದಾಗಿದೆ.




**ರಾಮಸೇತು ವಿಷಯದಲ್ಲಿ ಕೇಂದ್ರ ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಬೇಕೆಂದು ಆಗ್ರಹಿಸಿ ಬಿಜೆಪಿ ಮುಖಂಡ ಸುಬ್ರಹ್ಮಣ್ಯನ್ ಸ್ವಾಮಿ ಸಲ್ಲಿಸಿದ್ದ ಅರ್ಜಿ ವಿಚಾರಣೆಗೊಳಿಸಿದ ಸುಪ್ರೀಂ ಕೋರ್ಟ್, ರಾಮಸೇತು ವಿಷಯದಲ್ಲಿ ಕೇಂದ್ರ ಸರ್ಕಾರ ಈಗಾಗಲೇ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ಒಂದು ವೇಳೆ ನಿಲುವನ್ನು ಬದಿಗೊತ್ತಿ ಕೇಂದ್ರ ಸರ್ಕಾರವೇನಾದರೂ ರಾಮಸೇತುವಿಗೆ ಹಾನಿಯುಂಟಾಗುವ ರೀತಿ ನಡೆದುಕೊಂಡರೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿ ಎಂದು ಹೇಳಿದೆ. ರಾಮಸೇತು ವಿಷಯದಲ್ಲಿ (2014ರಲ್ಲಿ) ತನ್ನ ನಿಲುವನ್ನು ಸ್ಪಷ್ಟಪಡಿಸಿದ ಕೇಂದ್ರ ಸರ್ಕಾರ, ರಾಮಸೇತುವನ್ನು ಒಡೆಯುವುದಿಲ್ಲ ಎಂದು ಹೇಳಿದೆ. ರಾಮಸೇತು ಸಮುದ್ರ ಒಡೆದು ನೂತನ ಜಲಯೋಜನೆ ನಿರ್ಮಿಸುವ ವಿಚಾರವಾಗಿ ಹಿಂದಿನ ಯುಪಿಎ ಸರ್ಕಾರ ಪ್ರಸ್ತಾಪ ಮುಂದಿಟ್ಟಿತ್ತು. ಇದರ ವಿರುದ್ಧ ಸುಬ್ರಹ್ಮಣ್ಯನ್ ಸ್ವಾಮಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.**

ಕೇರಳದಲ್ಲಿ ವ್ಯವಸ್ಥಿತವಾಗಿ ಮಾನವ ಕಳ್ಳ ಸಾಗಣೆ ನಡೆಯುತ್ತಿದ್ದು, ಸಾರ್ವಜನಿಕ ಅಧಿಕಾರಿಗಳೂ ಇದರಲ್ಲಿ ಭಾಗಿಯಾಗಿದ್ದಾರೆ ಎಂದು ಕೇಂದ್ರೀಯ ತನಿಖಾ ಸಂಸ್ಥೆ ಸಿಬಿಐ ವಿಶ್ಲೇಷಿಸಿದೆ. ಭಾರತದ ಇತರೆ ಪ್ರದೇಶಗಳಿಗೆ ಹೋಲಿಸಿದರೆ, ಕೇರಳ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮೂಲಕ ವ್ಯವಸ್ಥಿತವಾಗಿ ಮಾನವ ಕಳ್ಳ ಸಾಗಣೆ ನಡೆಯುತ್ತಿದೆ. ವಿಪರ್ಯಾಸವೆಂದರೆ ಇಂತಹ ಪ್ರಕರಣಗಳಲ್ಲಿ ಸರ್ಕಾರಿ ಅಧಿಕಾರಿಗಳೇ ಪರೋಕ್ಷವಾಗಿ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ ಎಂದು ಅಧಿಕಾರಿಗಳು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಈ ಸಂಬಂಧ ನಡೆಯುತ್ತಿರುವ ವಿಚಾರಣೆಯಲ್ಲಿ ಚಾರ್ಜ್ ಶೀಟ್ ಸಲ್ಲಿಕೆ ಮಾಡಿರುವ ಸಿಬಿಐ ಅಧಿಕಾರಿಗಳು 2 ಮಾನವ ಕಳ್ಳಸಾಗಣೆ ಪ್ರಕರಣಗಳಲ್ಲಿ ಇಬ್ಬರು ಸರ್ಕಾರಿ ಅಧಿಕಾರಿಗಳ ಹೆಸರನ್ನು ನಮೂದಿಸಿದ್ದಾರೆ.

**ಇಂಡಿಯನ್ ಮುಜಾಹಿದಿನ್(ಐಎಮ್) ಉಗ್ರರ ಅಡಗು ತಾಣ ಎನ್ನುವ ಹಣೆಪಟ್ಟಿ ಕಟ್ಟಿಕೊಂಡಿರುವ ಕರ್ನಾಟಕದ ಕರಾವಳಿ ಪ್ರದೇಶ ಭಟ್ಕಳ ಈಗ ಅಂತಾರಾಷ್ಟ್ರೀಯ ಉಗ್ರ ಸಂಘಟನೆ ಐಸಿಸ್ ಉಗ್ರರ ಹುಟ್ಟು ಸ್ಥಳವಾಗಿ ಮಾರ್ಪಾಡಾಗುತ್ತಿದೆ ಎಂಬ ಸ್ಫೋಟಕ ಮಾಹಿತಿಯನ್ನು ಕೇಂದ್ರ ಗುಪ್ತಚರ ಇಲಾಖೆ ಬಹಿರಂಗಗೊಳಿಸಿದೆ. ಇತ್ತೀಚೆಗೆ ಕರ್ನಾಟಕದಾದ್ಯಂತ ಬಂಧಿತರಾದ ಬಹುತೇಕ ಉಗ್ರರು ಭಟ್ಕಳ ಸಂಪರ್ಕ ಹೊಂದಿದ್ದಾರೆ. ಇದಲ್ಲದೆ ದೇಶವ್ಯಾಪಿ ಬಂಧಿತರಾದ ಉಗ್ರರೂ ಭಟ್ಕಳದೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ ಎನ್ನಲಾಗುತ್ತಿದೆ. ಶಫಿ ಅರ್ಮರ್ ಎಂಬ ವ್ಯಕ್ತಿ ಭಟ್ಕಳದಿಂದ ಯುವಕರನ್ನು**




**ಐಸಿಸ್ ಕಡೆಗೆ ಕರೆದೊಯ್ಯುತ್ತಿದ್ದಾನೆ ಎಂಬ ಮಾಹಿತಿ ಲಭ್ಯವಾಗಿದೆ. ಈತ 2009 ಕ್ಕಿಂತ ಮುಂಚೆ ಭಟ್ಕಳದಲ್ಲಿ ತನ್ನ 3 ತಮ್ಮಂದಿರೊಂದಿಗೆ ಠಿಕಾಣಿ ಹೂಡಿದ್ದ. ನಂತರ ಪಾಕ್‌ಗೆ ತೆರಳಿ ಅಲ್ಲಿಂದ ಸಿರಿಯಾದಲ್ಲಿ ಐಸಿಸ್ ಸೇರಿ ಉಗ್ರರ ತರಬೇತಿ ಪಡೆದು ನಿರಂತರವಾಗಿ ಭಟ್ಕಳ ಸೇರಿದಂತೆ ತುಮಕೂರು, ಮಂಗಳೂರು, ಮುಂಬೈ, ಲಖ್ನೋ, ಹರಿದ್ವಾರ ಹಾಗೂ ಹೈದರಾಬಾದ್‌ಗಳಲ್ಲಿ ಗುಪ್ತ ಸಭೆ ನಡೆಸಿ ಯುವಕರನ್ನು ಉಗ್ರರನ್ನಾಗಿಸಲು ಪ್ರೇರೆಪಿಸುತ್ತಿದ್ದ ಎಂದು ವರದಿಯಾಗಿದೆ.**

2014ರ ಡಿಸೆಂಬರ್ 31ರ ರಾತ್ರಿ ಗುಜರಾತ್ ಕರಾವಳಿಯಲ್ಲಿ

## ಸಾಲುದ್ದದ ಸುದ್ದಿಗಳು



ಸಂಚರಿಸುತ್ತಿದ್ದ ಪಾಕಿಸ್ತಾನದ ಶಂಕಿತ ಉಗ್ರರ ದೋಣಿಯನ್ನು ತಡೆ ಹಿಡಿದಿದ್ದ ಕರಾವಳಿ ಕಾವಲು ಪಡೆ ಕಮಾಂಡೆಂಟ್ ಚಂದ್ರಶೇಖರ್ ಜೋಶಿ ಹಾಗೂ ದೋಣಿ ಇರುವ ಸ್ಥಳವನ್ನು ಪತ್ತೆಮಾಡಿ ಆ ಬಗ್ಗೆ ಜೋಶಿ ಅವರಿಗೆ ಮಾಹಿತಿ ನೀಡಿದ್ದ ಕಮಾಂಡೆಂಟ್ ಅಭಯ್ ಅಂಬೇಟ್ಕರ್ ಅವರಿಗೆ ಭಾರತ ಸರ್ಕಾರ ರಾಷ್ಟ್ರಪತಿಗಳ ತಟರಕ್ಷಕ್ ಶೌರ್ಯ ಪದಕವನ್ನು ನೀಡಿ ಗೌರವಿಸಿದೆ. ಘಟನೆ ನಡೆದಾಗ ಜೋಶಿ ಅವರ ನೇತೃತ್ವದಲ್ಲಿ ಭಾರತೀಯ ಕರಾವಳಿ ಕಾವಲು ಪಡೆ ನೌಕೆ 'ರಾಜ್‌ರತನ್' ಗುಜರಾತ್ ಕರಾವಳಿ ಬಳಿಯ ಅಂತರರಾಷ್ಟ್ರೀಯ ಜಲಗಡಿಯಲ್ಲಿ ಕರ್ತವ್ಯದಲ್ಲಿತ್ತು. ಶಂಕಿತ ಉಗ್ರರ ದೋಣಿಯ ಬಗ್ಗೆ ಮಾಹಿತಿ ಬಂದಾಗ ಅದರಿಂದ 170 ನಾಟಿಕಲ್ ಮೈಲು (ಸುಮಾರು 315 ಕಿ.ಮೀ) ದೂರದಲ್ಲಿದ್ದ ರಾಜ್‌ರತನ್ ಅನ್ನು ಗರಿಷ್ಠ ವೇಗದಲ್ಲಿ ದೋಣಿಯತ್ತ ಜೋಶಿ ಮುನ್ನಡೆಸಿದ್ದರು.

**ಸಹಸ್ತ್ರ ಸೀಮಾ ಬಲ(ಎಸ್‌ಎಸ್‌ಬಿ)ದ ಮೊದಲ ಮಹಿಳಾ ಪೊಲೀಸ್ ಮಹಾ ನಿರ್ದೇಶಕಿಯಾಗಿ ಐಪಿಎಸ್ ಅಧಿಕಾರಿ ಅರ್ಚನಾ ರಾಮಸುಂದರಮ್ ಅವರು ಸೋಮವಾರ ನೇಮಕವಾಗಿದ್ದಾರೆ. 1980ರ ಐಪಿಎಸ್ ಬ್ಯಾಚ್‌ನ ಅಧಿಕಾರಿ ಪ್ರಸ್ತುತ ನ್ಯಾಶನಲ್ ಕ್ರೈಮ್ ರೈಕಾರ್ಡ್ಸ್ ಬ್ಯೂರೋದ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.**



**ಸಿಬಿಐನ ಹೆಚ್ಚುವರಿ ನಿರ್ದೇಶಕಿಯಾಗಿಯೂ ಸೇವೆ ಸಲ್ಲಿಸಿದ್ದ ಅರ್ಚನಾ ಅವರು, 2017ರ ತನಕ ಎಸ್‌ಎಸ್‌ಬಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸಲಿದ್ದಾರೆ.**

**ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ) ಇತ್ತೀಚೆಗೆ ಐಆರ್‌ಎನ್‌ಎಸ್‌ಎಸ್–1ಇ (ಭಾರತೀಯ ಪ್ರಾದೇಶಿಕ ದಿಕ್ಸೂಚಿ ಉಪಗ್ರಹ ವ್ಯವಸ್ಥೆ) ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸುವ ಮೂಲಕ ಸಾಧನೆಯ ಮತ್ತೊಂದು ಗರಿಯನ್ನು ಮುಡಿಗೇರಿಸಿಕೊಂಡಿದೆ. ಈ ಉಪಗ್ರಹ ಉಡಾವಣೆಯ ಮೂಲಕ ಸ್ವಂತ ಜಿಪಿಎಸ್ ಹೊಂದುವ ಭಾರತದ ಕನಸು ನನಸಾಗಲು ಇನ್ನು ಎರಡು ಹೆಜ್ಜೆಯಷ್ಟೇ ಬಾಕಿಯಿದೆ. ಐಆರ್‌ಎನ್‌ಎಸ್‌ಎಸ್‌ನ ಇನ್ನೆರಡು ಉಪಗ್ರಹಗಳು ಉಡಾವಣೆಯಾಗಿ ಯಶಸ್ವಿಯಾದರೆ ಜಿಪಿಎಸ್‌ನಲ್ಲಿ ಸ್ವಾವಲಂಬನೆ ಸಾಧಿಸಿದ ವಿಶ್ವದ ಕೆಲವೇ ರಾಷ್ಟ್ರಗಳ ಸಾಲಿಗೆ ಭಾರತ ಸೇರ್ಪಡೆಗೊಳ್ಳಲಿದೆ. ಇಂದಿನ ತಂತ್ರಜ್ಞಾನ ಆಧಾರಿತ ಜಗತ್ತಿನಲ್ಲಿ**

**ದಿಕ್ಸೂಚಿ ವ್ಯವಸ್ಥೆ (ಜಿಪಿಎಸ್) ಮಹತ್ವ ಹೆಚ್ಚುತ್ತಿದೆ. ರಸ್ತೆ, ವಾಯು ಮತ್ತು ನೌಕಾಯಾನದ ಸಂದರ್ಭದಲ್ಲಿ ಮಾರ್ಗದರ್ಶನ ಪಡೆಯಲು, ವಿಪತ್ತು ನಿರ್ವಹಣೆ, ವಾಹನ ದಟ್ಟಣೆ ನಿಯಂತ್ರಣ ಮುಂತಾದ ಕಾರ್ಯಗಳಲ್ಲಿ ಜಿಪಿಎಸ್ ಬಹುಮುಖ್ಯ ಪಾತ್ರ ವಹಿಸುತ್ತದೆ. ಭಾರತದಲ್ಲಿ ಈ ಕಾರ್ಯಗಳಿಗೆ ಸದ್ಯ ಅಮೆರಿಕದ ಜಿಪಿಎಸ್ ಸೌಲಭ್ಯವನ್ನು ಬಳಸಿಕೊಳ್ಳಲಾಗುತ್ತಿದೆ.**

**ಪ್ರತಿದಿನ ನೂರಾರು ಭಕ್ತರು ಭೇಟಿ ನೀಡುವ ಐತಿಹಾಸಿಕ ಪ್ರಸಿದ್ಧ ದರ್ಗಾವಾದ ಮುಂಬೈಯ ಹಾಜಿ ಅಲಿ ದರ್ಗಾ ಪ್ರವೇಶಕ್ಕೆ ತಮಗೂ ಅವಕಾಶ ನೀಡಬೇಕು ಎಂದು ಮುಸ್ಲಿಂ ಮಹಿಳಾ ಸಂಘಟನೆಯ ಕಾರ್ಯಕರ್ತರು ಫಲಕಗಳನ್ನು ಹಿಡಿದು ಒತ್ತಾಯಿಸಿದರು. ಪುರುಷರ ಆಧಿಪತ್ಯದಿಂದ ಮಹಿಳೆಯರಿಗೆ ದರ್ಗಾ ಪ್ರವೇಶ ನಿರಾಕರಿಸಲಾಗಿದೆ. ಧಾರ್ಮಿಕವಾಗಿ ಮಹಿಳೆಯರ ಪ್ರವೇಶಕ್ಕೆ ಯಾವುದೇ ನಿಷೇಧವಿಲ್ಲ. ಇಂತಹ ನಿಷೇಧ ಇಸ್ಲಾಂ ಧರ್ಮಕ್ಕೆ ವಿರುದ್ಧವಾದುದು. ಭಾರತದ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಅವಕಾಶ ನೀಡಲಾಗಿದೆ. ಇಸ್ಲಾಂ ಧರ್ಮವು ದೇಶದ ಸಂವಿಧಾನವನ್ನು ಒಪ್ಪಿಕೊಂಡಿದೆ. ಆದ್ದರಿಂದ ಮಹಿಳೆಯರಿಗೆ ದರ್ಗಾವನ್ನು ಪ್ರವೇಶಿಸಲು ಅವಕಾಶ ನೀಡಬೇಕು ಎಂದು ಮುಸ್ಲಿಂ ಮಹಿಳೆಯರ ಹಕ್ಕುಗಳ ಸಂಘಟನೆ ಆಗ್ರಹಿಸಿದೆ. ಹಾಜಿ ಅಲಿ ಟ್ರಸ್ಟ್ ಮಹಿಳೆಯರ ದರ್ಗಾ ಪ್ರವೇಶಕ್ಕೆ ನಿಷೇಧ ಹೇರಿದೆ. ಈ ನಿರ್ಧಾರವನ್ನು ಪ್ರಶ್ನಿಸಿ ಬಾಂಬೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದ್ದು, ಅರ್ಜಿ ವಿಚಾರಣೆಯ ಹಂತದಲ್ಲಿದೆ.**

## ಹಸಿರೇ ಮೈವೆತ್ತ ಜ್ಞಾನ ದೇಗುಲ

ಶಾಲೆಗಳೆಂದರೆ ಬರೀ ಪಾಠ ಹೇಳುವ ಜಾಗವಷ್ಟೆ ಎಂದುಕೊಂಡರೆ ಅದು ತಪ್ಪಾದೀತು. ಪಾಠದ ಹೊರತಾಗಿಯೂ ಅನನ್ಯ ಕೆಲಸಗಳಿಂದ ಗುರುತಿಸಿಕೊಳ್ಳುವ ಹಲವು ಶಾಲೆಗಳು ನಮ್ಮ ನಡುವೆಯೇ ಇವೆ. ಅಂಥದ್ದೇ ಒಂದು ಶಾಲೆ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಚಿಮ್ಮಡ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ.

ಈ ಶಾಲೆ ಹೀಗೆ ಗುರುತಿಸಿಕೊಳ್ಳಲು ಮುಖ್ಯ ಕಾರಣ ಇಲ್ಲಿನ ಶಿಕ್ಷಕ ಡಿ.ಎಸ್. ಮಳಲಿ ಮತ್ತು ಎ.ಎಫ್. ಹೂಲಿ ದಂಪತಿಗಳು. ವಿದ್ಯಾರ್ಥಿಗಳಿಗೆ ಕೇವಲ ಪಠ್ಯದ ಜ್ಞಾನವನ್ನು ನೀಡದೇ ಅವರ ಉಜ್ವಲ ಭವಿಷ್ಯಕ್ಕೆ ನಾಂದಿ ಹಾಡಲು ವಿವಿಧ ಪಠ್ಯೇತರ ಚಟುವಟಿಕೆಗಳನ್ನು ನಡೆಸುವ ಮೂಲಕ ಸರ್ಕಾರಿ ಶಾಲೆಗಳನ್ನು ಎತ್ತರದ ಸ್ಥಾನಕ್ಕೆ ಕರೆದೊಯ್ಯುವ ಹೊಣೆಗಾರಿಕೆ ತೋರುತ್ತಿದ್ದಾರೆ. 'ನಮಗೆ ನಾವೇ ಮಾದರಿ ಎಂಬಂತೆ ಬದುಕುವುದನ್ನು ರೂಢಿಸಿಕೊಂಡಾಗ ಇತರರು ನಮ್ಮನ್ನು ಗುರುತಿಸುತ್ತಾರೆ, ಪ್ರೋತ್ಸಾಹಿಸುತಾರೆ, ನಾವು ಮಾದರಿಯಾಗುತ್ತೇವೆ' ಎಂಬ ಧ್ಯೇಯದೊಂದಿಗೆ ನಡೆಯುತ್ತಿರುವ ಈ ದಂಪತಿಗಳ ಶ್ರಮದಿಂದಾಗಿ ಇಂದು ಶಾಲೆಯ ಆವರಣದಲ್ಲಿ ನಂದನವನದಂತೆ ಕಂಗೊಳಿಸುವ ಉದ್ಯಾನ ಸೃಷ್ಟಿಯಾಗಿದೆ.


ದಾನ ಪರಂಪರೆ ಅಪರೂಪವಾಗುತ್ತಿರುವ ಇಂದಿನ ದಿನಗಳಲ್ಲೂ ಸ್ಥಳೀಯ ನಿವಾಸಿ ಶಂಕರಗೌಡ ಪಾಟೀಲರು ತಮ್ಮ ತೋಟದಲ್ಲಿ 17 ಗುಂಟೆ ಜಮೀನು ನೀಡಿದ್ದರಿಂದ 2003ರಲ್ಲಿ ಶಾಲೆ ಆರಂಭವಾಗಿದೆ. ಸದ್ಯ ಇಲ್ಲಿ 1ರಿಂದ 5ನೇ ತರಗತಿವರೆಗೆ 58ಮಕ್ಕಳು ಕಲಿಯುತ್ತಿದ್ದಾರೆ. ಮಾಮೂಲಾಗಿಯೇ ನಡೆಯುತ್ತಿದ್ದ ಶಾಲೆಯ ಚಿತ್ರಣ ಬದಲಾದದ್ದು 2010ರಲ್ಲಿ ಈ ದಂಪತಿಗಳು ಶಾಲೆಗೆ ಬಂದ ನಂತರ. ಅಕ್ಷರ ದಾಸೋಹದೊಂದಿಗೆ ಹಸಿರು ವನದ ಮೇಲೆ ಅಪಾರ ಪ್ರೀತಿ ಹೊಂದಿರುವ ಇವರು, ಪ್ರಾಕೃತಿಕ ಸೌಂದರ್ಯದಲ್ಲಿ ಮಕ್ಕಳು ನಲಿಯುತ್ತಾ ಕಲಿಯಬೇಕೆಂಬ ಹಂಬಲ ಹೊತ್ತರು. ಅದರ ಫಲವಾಗಿ ಇಂದು ಶಾಲೆಯ ಅಂಗಳದಲ್ಲಿ ಹಸಿರು ವನ ಅರಳಿನಿಂತಿದೆ. ಪ್ರತಿ ತಿಂಗಳು ತಮ್ಮ ಸಂಬಳದ ಒಂದಷ್ಟು ಹಣವನ್ನು ಈ ಉದ್ಯಾನವನಕ್ಕೆ ಮೀಸಲಿಡುತ್ತಾ ಬಂದಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ಇದರ ಫಲವಾಗಿ ಉದ್ಯಾನದಲ್ಲಿ ಬೇವು, ಬಾದಾಮಿ, ಚೆರ್ರಿ, ಸಿಲ್ವರ್ ಪರ್ಕ್, ಪಾಷ್ಟೊ ಪಾರ್ಮ್, ಹೊಂಗೆ, ನುಗ್ಗೆ, ಸಂಪಿಗೆ, ಕರಿಬೇವು... ಹೀಗೆ ನೂರಾರು ಬಗೆಯ ಗಿಡ–ಮರಗಳು ಬೆಳೆದುನಿಂತಿವೆ. ಇಲ್ಲಿಯ ಹಸಿರು ಹುಲ್ಲುಹಾಸು ಶಾಲೆಯ ಅಂದಚೆಂದಕ್ಕೆ ಮೆರಗು ತಂದಿದೆ. ಇದರಲ್ಲಿ ಮಕ್ಕಳ ಪರಿಶ್ರಮವೂ ಅಪಾರ. ಇಲ್ಲಿ ಓದುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿ ಶಾಲಾ ಆವರಣದ ಗಿಡಮರಗಳ ಜವಾಬ್ದಾರಿ ಹೊತ್ತು ಕಾಳಜಿಯಿಂದ ಅವುಗಳನ್ನು ಪೋಷಣೆ ಮಾಡುತ್ತಿದ್ದಾರೆ. ಕುಂಡಗಳಲ್ಲಿ ವಿವಿಧ ಜಾತಿಯ ಸಸಿ ನೆಟ್ಟು, ಒಂದು ಮಗುವಿಗೆ ಎರಡರಂತೆ ಕುಂಡಗಳನ್ನು ನೀಡಿ ಅವುಗಳನ್ನು ಬೆಳೆಸಲು ಪ್ರೋತ್ಸಾಹ ನೀಡಲಾಗುತ್ತಿದೆ. ನೀರಿನ ಮಹತ್ವ ಹಾಗೂ ಶ್ರಮದಾನದ ಮಹತ್ವವನ್ನೂ ಕಲಿಸುತ್ತಿದ್ದಾರೆ. ಈ ಶಾಲೆ ಹಾಗೂ ಶಿಕ್ಷಕ ದಂಪತಿಗಳನ್ನು ಹಲವು ಪ್ರಶಸ್ತಿಗಳು ಹುಡುಕಿ ಬಂದಿವೆ. ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 'ಹಸಿರು ಶಾಲೆ' ಪ್ರಶಸ್ತಿ ದಕ್ಕಿದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

15-2-2016






# ಸ್ಮೃತಿ ಮಂದಾರ

(ಡಾ ಹೆಡಗೆವಾರ್ ಜೀವನ ಪ್ರಸಂಗಗಳು)

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಡಾ॥ ಕೇಶವ ಬಲಿರಾಮ್ ಹೆಡಗೆವಾರ್ ಅವರ ಜೀವನವನ್ನು ಪರಿಚಯಿಸುವ ಪುಸ್ತಕ ಇದು. ಬಾಲ್ಯದಿಂದಲೂ ದೇಶಭಕ್ತಿಯನ್ನು ಮೈಗೂಡಿಸಿಕೊಂಡ ಕೇಶವ, ಅನೇಕ ಕ್ರಾಂತಿಕಾರಿಗಳೊಂದಿಗೆ ನೇರ ಸಂಪರ್ಕ ಹೊಂದಿದ್ದರು. ಕ್ರಾಂತಿ ಚಟುವಟಿಕೆಯಲ್ಲಿಯೂ, ಕಾಂಗ್ರೆಸ್ ನೇತೃತ್ವದ ಅಹಿಂಸಾತ್ಮಕ ಹೋರಾಟದಲ್ಲಿಯೂ ಪಾಲ್ಗೊಂಡಿದ್ದರು. ಭಾರತೀಯ ಸಾಂಸ್ಕೃತಿಕ-ಸಾಮಾಜಿಕ ಪರಂಪರೆಯ ಅರಿವಿದ್ದ ಅವರು ಭಾರತವನ್ನು ಮತ್ತೊಮ್ಮೆ ಜಗತ್ತಿಗೆ ಮಾರ್ಗದರ್ಶಿ ಸ್ಥಾನಕ್ಕೇರಿಸಲು 1925ರಲ್ಲಿ ಆರೆಸ್ಸೆಸ್‌ನ್ನು ಪ್ರಾರಂಭಿಸಿದರು. ತಮ್ಮ ಜೀವಿತಾವಧಿಯಲ್ಲಿಯೇ ಅದನ್ನು ದೇಶದ ಎಲ್ಲ ಪ್ರಾಂತಗಳಿಗೂ ತಲಪಿಸಿದರು. ಅವರ ಜೀವನ ಪ್ರಸಂಗಗಳ ಸಂಗ್ರಹವೇ 'ಸ್ಮೃತಿಮಂದಾರ'.

**ಸಂಗ್ರಾಹಕ:** ಚಂದ್ರಶೇಖರ ಭಂಡಾರಿ
**ಬೆಲೆ:** ರೂ. 200/-

**ಪ್ರಕಾಶಕರು:** ಸಾಹಿತ್ಯ ಸಂಗಮ
**ಪ್ರತಿಗಳಿಗಾಗಿ ಸಂಪರ್ಕಿಸಿ:** 'ಸಾಹಿತ್ಯ ಸಂಗಮ'
74, ರಂಗರಾವ್ ರಸ್ತೆ, ಶಂಕರಪುರಂ,
ಬೆಂಗಳೂರು- 04 **ದೂರವಾಣಿ:** 080-26610081

# ಪ್ರಬೋಧಿನೀ ಗುರುಕುಲದಲ್ಲಿ ಪ್ರವೇಶಕ್ಕಾಗಿ ಅರ್ಜಿ

ಪ್ರಬೋಧಿನೀ ಗುರುಕುಲದಲ್ಲಿ 2016-17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಧ್ಯಯನ ಮಾಡಬಯಸುವ ಗಂಡುಮಕ್ಕಳಿಗೆ ಅರ್ಜಿಗಳು ದೊರೆಯುತ್ತಿದ್ದು ಆಸಕ್ತರು 'ಗುರುಕುಲ ಪ್ರವೇಶಕ್ಕಾಗಿ' ಎಂದು ಸ್ಪಷ್ಟವಾಗಿ ಬರೆದು, 'ಪ್ರಬೋಧಿನೀ ಟ್ರಸ್ಟ್', ಈ ಹೆಸರಿಗೆ 200/- ರೂ.ಗಳ ಡಿ.ಡಿ. ಯನ್ನು ಮಾರ್ಚ್ 30ರ ಒಳಗೆ ಕಳುಹಿಸಬೇಕಾಗಿ ಈ ಮೂಲಕ ತಿಳಿಸಲಾಗಿದೆ.

### ಗುರುಕುಲ ಶಿಕ್ಷಣ ಯಾರಿಗೆ ಮತ್ತು ಹೇಗೆ?

- ಗುರುಕುಲದ ಒಟ್ಟು ಕಲಿಕೆಯ ಅವಧಿ 12 ವರ್ಷಗಳು.
- ವೇದ, ವಿಜ್ಞಾನ, ಯೋಗ, ಕೃಷಿ ಮತ್ತು ಕಲಾ ಎಂಬ ಪಂಚಮುಖೀ ಶಿಕ್ಷಣ ವ್ಯವಸ್ಥೆ.
- 4ನೇ ತರಗತಿ ಪರೀಕ್ಷೆ ಬರೆದ 10 ವರ್ಷ ತುಂಬಿದ ಗಂಡುಮಕ್ಕಳಿಗಾಗಿ,
- ಆರ್ಷ ಪರಂಪರೆಯ ಅಧ್ಯಾತ್ಮ ಆಧಾರಿತ ಶಿಕ್ಷಣದೊಂದಿಗೆ ಗಣಿತ, ವಿಜ್ಞಾನ, ಇತಿಹಾಸದ ಶಿಕ್ಷಣ.
- ಸಂಸ್ಕೃತದಲ್ಲಿ ದೈನಂದಿನ ವ್ಯವಹಾರಕ್ಕೆ ಮತ್ತು ಶಾಸ್ತ್ರೀಯ ಅಧ್ಯಯನಕ್ಕೆ ಸದವಕಾಶ.
- ಕನ್ನಡದೊಂದಿಗೆ ಇಂಗ್ಲೀಷ್ ಮತ್ತು ಹಿಂದೀ ಭಾಷೆಗಳ ಕಲಿಕೆಗೆ ಸೂಕ್ತ ಅವಕಾಶ.
- ವಿದ್ಯಾರ್ಥಿಗಳಿಗೆ ಇಲ್ಲಿ **ಆಹಾರ, ವಸತಿ, ಊಟ ಮತ್ತು ಶಿಕ್ಷಣ**ಗಳನ್ನು ಉಚಿತವಾಗಿ ನೀಡಲಾಗುತ್ತದೆ.

**ವೇದಶಿಬಿರಕ್ಕಾಗಿ ಅರ್ಜಿ:** 2015-16 ನೇ ಸಾಲಿನಲ್ಲಿ 8, 9ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ವೇದ ಶಿಕ್ಷಾವರ್ಗಕ್ಕೆ ಆಸಕ್ತರು ಅರ್ಜಿ ಸಲ್ಲಿಸಬಹುದು. "ಪ್ರಬೋಧಿನೀ ಟ್ರಸ್ಟ್" ಹೆಸರಿನಲ್ಲಿ ರೂ. 150.00 ಡಿ.ಡಿ ಪಡೆದು ಕಳುಹಿಸುವುದು. ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸುವ ಕೊನೆಯ ದಿನಾಂಕ ಮಾರ್ಚ್ 30.

**ಡಿ.ಡಿ. ಕಳುಹಿಸಬೇಕಾದ ವಿಳಾಸ:**
ವ್ಯವಸ್ಥಾಪಕರು. ಪ್ರಬೋಧಿನೀ ಗುರುಕುಲ,
ಚಿತ್ರಕೂಟ, ಅದ್ದಡ ಗ್ರಾಮ, ಹರಿಹರಪುರ ಅಂಚೆ
ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ 577 120
ಸಂಪರ್ಕಕ್ಕೆ : 08265-274232, 9845071185.
Email : prabodhinigurukula@gmail.com
ಹೆಚ್ಚಿನ ಮಾಹಿತಿಗಳಿಗಾಗಿ:
www.prabodhinigurukula.org ಗೆ ಭೇಟಿ ಕೊಡಿ.

# ಹಿಂದು ವಿವಾಹಕ್ಕೆ ಪಾಕ್ಷನಲ್ಲಿಲ್ಲ ಮಾನ್ಯತೆ

ಧಾರ್ಮಿಕ, ಸಾಂಸ್ಕೃತಿಕ ಮತ್ತಿತರ ವಿಚಾರಗಳಿಗೆ ಸಂಬಂಧಿಸಿ ತಾರತಮ್ಯ ಅನುಭವಿಸುತ್ತಿರುವುದು ಪಾಕಿಸ್ತಾನದಲ್ಲಿರುವ ಹಿಂದುಗಳು ಕಾನೂನಾತ್ಮಕವಾಗಿಯೂ ಭಾರಿ ತೊಂದರೆ ಅನುಭವಿಸುತ್ತಿರುವುದು ಬೆಳಕಿಗೆ ಬಂದಿದೆ. ಪಾಕ್‌ನಲ್ಲಿ ಹಿಂದು ವಿವಾಹಕ್ಕೆ ಕಾನೂನು ಮಾನ್ಯತೆ ಇಲ್ಲ. ಇದರಿಂದಾಗಿ ಅಲ್ಪಸಂಖ್ಯಾತ ಹಿಂದು ಸಮುದಾಯ ಬಾರೀ ತೊಂದರೆ ಅನುಭವಿಸುವಂತಾಗಿದೆ. ನನೆಗುದಿಗೆ ಬಿದ್ದಿರುವ ಹಿಂದು ವಿವಾಹ ಕಾಯ್ದೆ ಜಾರಿಗೆ ತರುವ ವಿಚಾರದಲ್ಲಿ ಸರ್ಕಾರ ಬದ್ಧತೆ ಪ್ರದರ್ಶಿಸುತ್ತಿಲ್ಲ ಎಂದು ಪಾಕ್ ಪತ್ರಿಕೆಯೊಂದು ತಿಳಿಸಿದೆ.

1947ರಲ್ಲಿ ಪಾಕಿಸ್ತಾನದಲ್ಲಿದ್ದ ಹಿಂದುಗಳನ್ನು ಬಲವಂತವಾಗಿ ಹೊರದಬ್ಬಲಾಯಿತು. ಹಿಂದುಗಳ ಆಸ್ತಿಪಾಸ್ತಿ, ದೇಗುಲಗಳನ್ನು ಧ್ವಂಸಗೊಳಿಸಿ ಅತಿಕ್ರಮಣ ಮಾಡಿಕೊಳ್ಳಲಾಯಿತು. ಅಳಿದುಳಿದ ಹಿಂದುಗಳಿಗೆ ಕನಿಷ್ಠ ಸೌಲಭ್ಯ, ಕಾನೂನು ನೆರವನ್ನು ನಿರಾಕರಿಸಲಾಯಿತು. ಮುಖ್ಯವಾಗಿ ಹಿಂದುಗಳ ವಿವಾಹಕ್ಕೆ ಕಾನೂನು ಮಾನ್ಯತೆಯೇ ಇಲ್ಲ. ಇದರಿಂದ ಕಚೇರಿ ಕೆಲಸಕಾರ್ಯಗಳ ವೇಳೆ ಅರ್ಜಿಫಾರಂಗಳಲ್ಲಿ ಸಂಬಂಧದ ಬಗ್ಗೆ ಉಲ್ಲೇಖಿಸುವುದು, ಬ್ಯಾಂಕ್ ಖಾತೆ ಮುಂತಾದ ಸರಳ ಕಾರ್ಯಗಳಿಗೂ ಹಿಂದುಗಳು ಪರದಾಡುವಂತಾಗಿದೆ. ಕಾಯ್ದೆ ಜಾರಿಗೊಳಿಸುವಂತೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದ್ದರೂ ಅದನ್ನು ಪಾಲಿಸಲಾಗಿಲ್ಲ. ಇದಕ್ಕೆ ಮತಾಂತರದ ಉದ್ದೇಶವೂ ಇಲ್ಲದಿಲ್ಲ. ಸರ್ಕಾರಿ ಕೆಲಸಕಾರ್ಯಗಳು ಸಾಧ್ಯವಾಗದೇ ಬೇಸತ್ತ ಹಿಂದುಗಳನ್ನು ಇಸ್ಲಾಂಗೆ ಮತಾಂತರಿಸುವ ಯತ್ನ ನಿರಂತರವಾಗಿ ನಡೆಯುತ್ತಿವೆ. ಪಾಕಿಸ್ತಾನದ ಒಟ್ಟು ಜನಸಂಖ್ಯೆಯಲ್ಲಿ ಹಿಂದುಗಳ ಪ್ರಮಾಣ ಶೇ. 25 ರಿಂದ ಶೇ. 1.2ಕ್ಕೆ ಇಳಿದಿದೆ (1947 ರಿಂದ 1998ಕ್ಕೆ). ಪ್ರಸ್ತುತ ಸುಮಾರು 10 ಲಕ್ಷ ಹಿಂದುಗಳು ಹಾಗೂ 20,000 ಸಿಖ್ಖರು ಪಾಕ್‌ನಲ್ಲಿ ನೆಲೆಸಿದ್ದಾರೆ ಎಂದು ಅಮೆರಿಕದ ಧಾರ್ಮಿಕ ಸ್ವಾತಂತ್ರ್ಯ ವರದಿ ಹೇಳಿದೆ.





ಗುಜರಾತ್-ರಾಜ್ಯಸ್ಯ ಮೆಹಸಾಣಾ-ಜನಪದೇ ಅಷ್ಟಷಷ್ಟಿ(68)ವರ್ಷೀಯಃ ಖಿಮ್ಜಿಬಾಯಿ ಪ್ರಜಾಪತಿಃ ಇತ್ಯಾಖ್ಯಃ ಭಿಕ್ಷುಕಃ ಸೇವಾವಸತಿಪ್ರದೇಶೇ ವಸದ್ಭ್ಯಃ ದಶ(10)ಬಾಲಿಕಾಭ್ಯಃ ಸುವರ್ಣ-ಕರ್ಣಾಭರಣಾನಿ ಉಪಾಯನೀಕೃತವಾನ್. ಏಕೈಕಸ್ಯ ಸುವರ್ಣ-ಕರ್ಣಾಭರಣಸ್ಯ ಮೂಲ್ಯಂ ತ್ರಯೋದಶಸಹಸ್ರಂ (13,000) ರೂಪ್ಯಕಾಣಿ. ನ ಕೇವಲಂ ತಾವತ್, ತೇನ ಬಾಲೇಭ್ಯಃ ಪುಸ್ತಕಾನಿ ಸಮವಸ್ತ್ರಾಣಿ ಚ ಉಪಾಯನರೂಪೇಣ ಪ್ರದತ್ತಾನಿ. ತ್ರಯೋದಶ(13) ವರ್ಷೇಭ್ಯಃ ಭಿಕ್ಷಾಯಾಚನೇನ ಸಂಪಾದಿತೇನ ಧನೇನ, ತೇನ ಈದೃಶಂ ಸಾಹಾಯ್ಯಂ ಕೃತಮ್. ತೇನ ಏತತ್ ಸಾಹಾಯ್ಯಂ ಐದಮ್ಪ್ರಾಥಮ್ಯೇನ ನ ಕೃತಮ್. ಬಹುಭ್ಯಃ ವರ್ಷೇಭ್ಯಃ ನಿರ್ಧನಾಭ್ಯಃ ಬಾಲಿಕಾಭ್ಯಃ ತೇನ ಸಾಹಾಯ್ಯಂ ಕ್ರಿಯಮಾಣಮಸ್ತಿ

# ಮೊಬೈಲ್ ಇಂಟರ್ನೆಟ್




ನಿಮ್ಮ ಸ್ಮಾರ್ಟ್ ಫೋನ್ ಅಂತರ್ಜಾಲಕ್ಕೆ ಸಂಪರ್ಕಗೊಂಡರೆ ಅನೇಕ ರೀತಿಯ ಪ್ರಯೋಜನಗಳು ಸಿಗುತ್ತವೆ. ಮಾಹಿತಿ, ಚಿತ್ರ, ವಿಡಿಯೋ ಪಡೆದುಕೊಳ್ಳುವುದು/ ಇನ್ನೊಬ್ಬರಿಗೆ ಕಳುಹಿಸುವುದು, ವಾಟ್ಸಾಪ್. ಸಾಮಾಜಿಕ ತಾಣಗಳಾದ ಫೇಸ್‌ಬುಕ್, ಟ್ವಿಟ್ಟರ್ ಬಳಸುವುದು ಮುಂತಾದವುಗಳಿಗೆ ಅಂತರ್ಜಾಲ ಬೇಕು.

ಸಾಮಾನ್ಯವಾಗಿ ಮೊಬೈಲ್ ಅಂತರ್ಜಾಲವನ್ನು ಎರಡು ರೀತಿಯಲ್ಲಿ ಪಡೆಯಲಾಗುತ್ತದೆ. ವೈಫೈ ಮತ್ತು ಮೊಬೈಲ್ ಡಾಟಾ. ನಿಮ್ಮ ಮೊಬೈಲಿನಲ್ಲಿ ಈ ಎರಡು ಸಂಕೇತಗಳ ಮೂಲಕ ಅವುಗಳನ್ನು ಪ್ರತಿನಿಧಿಸಿರುತ್ತಾರೆ.



ಮೊಬೈಲ್ ಡಾಟಾ ನಿಮ್ಮ ಮೊಬೈಲ್ ಆಪರೇಟರ್ (ಬಿ.ಎಸ್.ಎನ್.ಎಲ್, ಏರ್ಟೆಲ್, ವೊಡಾಫೋನ್ ಇತ್ಯಾದಿ) ಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ಮೊಬೈಲ್ ನೆಟ್ವರ್ಕ್ ವ್ಯಾಪ್ತಿಯಲ್ಲಿದ್ದರೆ ಇದನ್ನು ಬಳಸಲು ಸಾಧ್ಯ. ನೀವು ಮೊಬೈಲ್ ಡಾಟಾ ಬಳಸುವುದಾದರೆ, ಸೂಕ್ತವಾದ ಡಾಟಾ ಪ್ಲಾನ್ ಅನ್ನು ಹಾಕಿಕೊಳ್ಳಬೇಕಾಗುತ್ತದೆ. ನಿಮ್ಮ ಅಗತ್ಯಕ್ಕೆ ತಕ್ಕ ಪ್ಲಾನ್ ಆರಿಸಿಕೊಳ್ಳಿರಿ, ಇಲ್ಲವಾದಲ್ಲಿ ಇದು ದುಬಾರಿಯೆನಿಸಿಕೊಳ್ಳಬಹುದು (ನಿಮ್ಮ ಕರೆನ್ಸಿಯ ಹಣ ಬಳಕೆಯಾಗುತ್ತದೆ). ನೀವು ಬಳಸಿದಿರುವಾಗ, ಮೇಲೆ ತಿಳಿಸಿದ ಸಂಕೇತವಿರುವ ಗುಂಡಿಯ ಮುಖಾಂತರ ನಿಮ್ಮ ಡಾಟಾ ಆಫ್ ಆಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಮೊಬೈಲ್ ಡಾಟಾಗಳು ಲಭ್ಯತೆಗನುಗುಣವಾಗಿ 2G, 3G ಅಥವಾ 4G ಆಗಿರಬಹುದು. 2G ಕಡಿಮೆ ವೇಗವನ್ನು ಹೊಂದಿದ್ದು 4G ಅತೀ ಹೆಚ್ಚು ವೇಗದ ಅಂತರ್ಜಾಲವನ್ನು ಒದಗಿಸುತ್ತದೆ. 2G ಬಳಸುವಾಗ ಕಡಿಮೆ ಪ್ರಮಾಣದ ಬ್ಯಾಟರೀ ಬಳಕೆಯಾಗುತ್ತದೆ.



ವೈ-ಫೈ ಸೀಮಿತ ವ್ಯಾಪ್ತಿ (ಸುಮಾರು 100 ಅಡಿ)ಯ ಒಳಗೆ ಸಂಪರ್ಕ ಒದಗುವ ತಂತ್ರಜ್ಞಾನ. ಅಲ್ಲಿಂದಾಚೆಗೆ ಅದು ಬ್ರಾಡ್-ಬ್ಯಾಂಡ್ ಸಂಪರ್ಕ ಅಥವಾ ಇನ್ಯಾವುದೇ ವೈರ್ ಮೂಲಕ ಸಿಗುವ ಇಂಟರ್ನೆಟ್ ಸಂಪರ್ಕಕ್ಕೆ ಜೋಡಿಕೊಂಡಿರಬೇಕಾಗುತ್ತದೆ. ನಿಮ್ಮ ಮನೆಯಲ್ಲಿ ಟೆಲಿಫೋನ್ ಸಂಪರ್ಕದ ಮೂಲಕ ಬ್ರಾಡ್-ಬ್ಯಾಂಡ್ ಪಡೆದಿದ್ದಲ್ಲಿ, ಒಂದು ರೌಟರ್ ಎಂಬ ಸಾಧನದ ಮೂಲಕ ಮನೆಯಲ್ಲಿ ವೈ-ಫೈ ಸಿಗುವಂತೆ ಮಾಡಬಹುದು.

ಕೆಲವು ಹೋಟೆಲ್‌ಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಉಚಿತವಾಗಿ ವೈ-ಫೈ ಇಂಟರ್ನೆಟ್ ಸೌಲಭ್ಯ ನೀಡಿರುತ್ತಾರೆ. ಇತ್ತೀಚಿಗೆ ಹಲವು KSRTC ಬಸ್ ಸ್ಟಾಂಡುಗಳಲ್ಲಿ ಉಚಿತ ವೈ-ಫೈ ಅಳವಡಿಸಲಾಗಿದೆ. ಅಂತಹ ಸ್ಥಳಗಳಲ್ಲಿ ವೈ-ಫೈ ಗುಂಡಿಯನ್ನು ಬಳಸಿ ಆ ಸಂಪರ್ಕ ಜಾಲವನ್ನು ಸೇರಿಕೊಳ್ಳಬೇಕು. ಯಾರಾದರೂ ದುರುದ್ದೇಶಗಳಿಗೆ ಅದನ್ನು ಬಳಸುವುದನ್ನು ತಪ್ಪಿಸುವ ಸಲುವಾಗಿ ಒಂದು ಪಾಸ್‌ವರ್ಡ್ ಅನ್ನು ಅದು ಬಳಕೆದಾರರ ಮೊಬೈಲಿಗೆ ಎಸ್.ಎಂ.ಎಸ್ ಮೂಲಕ ಕಳುಹಿಸಿ, ದೃಢೀಕರಿಸಿದ ನಂತರ ಇಂಟರ್ನೆಟ್ ಬಳಸುವ ಅವಕಾಶ ನೀಡುತ್ತದೆ.

ಅಜ್ಞಾತ ಮೂಲದಿಂದ ಸಿಗುವ ಉಚಿತ ಅಂತರ್ಜಾಲ ಬಳಸುವ ಮೊದಲು ಎಚ್ಚರಿಕೆಯಿಂದಿರಬೇಕಾಗಿರುವುದು ಅವಶ್ಯ. ವೈರಸ್‌ಗಳನ್ನು ಹರಡುವುದು, ಮಾಹಿತಿ ಕದಿಯುವುದು ಮೊದಲಾದ ಉದ್ದೇಶಗಳಿಗಾಗಿಯೂ ಅವರು ಅದನ್ನು ನೀಡುವ ಸಾಧ್ಯತೆಯಿರುತ್ತದೆ.

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.
ಚಂದಾ/ನವೀಕರಣ/ವಿಳಾಸ ಬದಲಾವಣೆಗಾಗಿ ಸಂಪರ್ಕಿಸಿ : #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-04. ಮೊಬೈಲ್: 97391 83021 ಸಂಪಾದಕೀಯ : 97312 64009